## 84

# ಯೂದಾಯದಲ್ಲಿ ನಿದ್ರೆಯಿಲ್ಲದಿರುವಿಕೆ

### ಓದುವ ಮನೆಪಾಠ #36

VII. ಯೇಸುವಿನ ಸೇವೆಯ ಅಂತಿಮ ವಾರ (ಮುಂದುವರೆಯುವದು).

H. ಶುಕ್ರವಾರ: ಯೇಸುವಿನ ಮರಣದ ದಿನ (ಮುಂದುವರೆಯುವದು).

2. ಗೆತ್ಸೆಮನೆ ತೋಟ (ಮತ್ತಾಯ 26:30, 36-46; ಮಾರ್ಕ 14:26, 32-42; ಲೂಕ 22:39-46; ಯೋಹಾನ 18:1).
3. ತಿರಸ್ಕೃತ ಹಾಗೂ ಬಂಧನ (ಮತ್ತಾಯ 26:47-56; ಮಾರ್ಕ 14:43-52; ಲೂಕ 22:47-53; ಯೋಹಾನ 18:2-11).
4. ಯೆಹೂದ್ಯರು ನಡೆಸಿದ ವಿಚಾರಣೆ (ಹಂತ ಒಂದು ಮತ್ತು ಎರಡು):
   a. ಮೊದಲ ಸಂದರ್ಭ: ಅನ್ನನ ಪರೀಶಿಲನೆ (ಯೋಹಾನ 18:12-14, 19-23).
   b. ಎರಡನೇ ಸಂದರ್ಭ: ಹಿರಿ ಸಭೆಯವರು ಹಾಗೂ ಕಾಯಫನು ಆತನನ್ನು ಅಪರಾಧಿಯೆಂದು ನಿರ್ಣಯಿಸಿದರು (ಮತ್ತಾಯ 26:57, 59-68; ಮಾರ್ಕ 14:53, 55-65; ಲೂಕ 22:54, 63-65; ಯೋಹಾನ 18:24).

### ಪೀಠಿಕೆ

ನೀವು ಎಂದಾದರೂ ನಿದ್ರಾರಹಿತ ರಾತ್ರಿಯನ್ನು ಕಳೆದಿದ್ದೀರಾ? ಆ ನಿದ್ರೆಯು ಬಾರದಿರುವದಕ್ಕೆ ಬಹುಶಃ ನೀವು ಬಲು ಚಿಂತೆಯಿಂದ ತುಂಬಿದವರಾಗಿರಬಹುದು ಅಥವಾ ತಲ್ಲಣದಿಂದ ಕೂಡಿರಬಹುದು ಅಥವಾ ನೋವಿನಿಂದ ತುಂಬಿದವರಾಗಿರಬಹುದು. ನಾನೂ ಸಹ ಅನೇಕ ನಿದ್ರಾರಹಿತ ರಾತ್ರಿಗಳನ್ನು ಕಳೆದಿದ್ದೇನೆ ಮತ್ತು ನೀವು ಅದೇ ರೀತಿಯಲ್ಲಿ ಕಳೆದಿರಬಹುದು. ತನ್ನ ಮರಣಕ್ಕೆ ಮುನ್ನ, ಯೇಸುವೂ ನಿದ್ರಾರಹಿತ ದಿನಗಳನ್ನು ಹೊಂದಿದ್ದನು. ಆತನ ಶಿಷ್ಯರು ಒಂದು ತಾಸು ಅದಕ್ಕಿಂತ ಹೆಚ್ಚು ನಿದ್ರೆಯಲ್ಲಿ ಇದ್ದಿರಬಹುದು (ಮತ್ತಾಯ 26:40), ಆದರೆ ಆತನು ಹಾಗೆ ಮಾಡಲಿಲ್ಲ. ರಾತ್ರಿ ಜಾವದ ಮೊದಲ ಭಾಗದಲ್ಲಿ, ಯೇಸುವಿನ ವಿಚಾರಗಳು ನಿದ್ರೆಗೆ ಪೂರಕವಾಗಿರಲಿಲ್ಲ; ರಾತ್ರಿ ಜಾವದ ಕೊನೆಯ ಭಾಗದಲ್ಲಿ ಆತನ ವೈರಿಗಳು ಆತನಿಗೆ ನಿದ್ರೆ ಮಾಡಲು ಬಿಡಲಿಲ್ಲ.

ನಮ್ಮ ಹಿಂದಿನ ಪಾಠವು ಯೋಹಾನ 14-17ರ ಮೇಲಿತ್ತು. ಆ ಅಧ್ಯಾಯಗಳಲ್ಲಿನ ಪ್ರತಿಯೊಂದು ವಿಷಯಗಳನ್ನು ಆತನು ಚರ್ಚಿಸುವಾಗ ಕರ್ತನ ಖಚಿತವಾದ ಇರುವಿಕೆಯ ಬಗ್ಗೆ ನಮಗೆ ಅನಿಶ್ಚಿತವಾಗಿದೆ. 14ನೇಯ ಅಧ್ಯಾಯದ ಕೊನೆಯಲ್ಲಿ ಯೇಸು "ಏಳಿರಿ ಇಲ್ಲಿಂದ ಹೋಗೋಣ" ಎಂದು ಹೇಳಿದನು (ವಚನ 31ಬಿ). ಆತನ ಶಿಷ್ಯರು ಆ ಸ್ಥಳದಿಂದಲೇ ಮೇಲುಪ್ಪರಿಗೆಯ ಮನೆಯನ್ನು ಬಿಟ್ಟರು ಮತ್ತು 15, 16 ಮತ್ತು 17 ಅಧ್ಯಾಯಗಳು ಗೆತ್ಸೆಮನೆಯ ತೋಟದತ್ತ ನಡೆದರು ಎಂದು ಸೂಚಿಸಬಹುದಾಗಿದೆ.[1] ಇನ್ನೊಂದೆಡೆಯಲ್ಲಿ ಯೇಸು "ಇಲ್ಲಿಂದ ಹೋಗೋಣ" ಎಂದು ಹೇಳಿದ ನಂತರ, ಅಲ್ಲಿಂದ ಬಿಡುವ ಮುನ್ನ ಕೆಲಕ್ಷಣ ಅವರು ಕಾಲಹರಣಮಾಡಿರಬಹುದು. ("ನಾವು ಹೋಗಲೇಬೇಕು" ಎಂದು ಹೇಳುತ್ತಾ ಇನ್ನೂ ಒಂದು ತಾಸು ತಡಮಾಡುವ ಅತಿಥಿಗಳು ನಮ್ಮಲ್ಲಿದ್ದಾರೆ.) ಕೆಲ ವಿಷಯಗಳಲ್ಲಿ, ಹೇಗೋ ಕ್ರಿಸ್ತನೂ

ಮತ್ತು ಹನ್ನೊಂದು ಮಂದಿ ಮೇಲುಪ್ಪರಿಗೆ ಮನೆಯನ್ನು ಬಿಟ್ಟರು ಮತ್ತು ಗೆತ್ಸೆಮನೆ ತೋಟದತ್ತ ನಡೆದರು (ಮತ್ತಾಯ 26:30, 36).[2]

ಯೇಸುವಿನ ಮುಂದುವರೆದ ಉಪದೇಶವು ಮುಗಿಯಿತು, ಈ ವಿಷಯದಿಂದ, ಸುವಾರ್ತೆಯ ವಿವರಣೆಯ ಬರಹಗಾರರು ಪ್ರಸಂಗವನ್ನು ಬೋಧಿಸುವದಕ್ಕಿಂತ ಹೆಚ್ಚಾಗಿ ಇತಿಹಾಸದ ಬಗ್ಗೆ ಕಾಳಜಿಯುಳ್ಳವರಾಗಿದ್ದರು.[3] ಅದಲ್ಲದೆ, ಯೇಸುವನ್ನು ಕ್ರೂಜೆಗೆ ಹಾಕುವುದಕ್ಕಿಂತ ಮುಂಚಿನ ತಾಸುಗಳಿಂದ ಕಲಿಯುವದು ಹೆಚ್ಚಾಗಿರುವುದಾಗಿದೆ.

## ವಿನಾಶದ ತಾಪ

## (ಮತ್ತಾಯ 26:30, 36-46; ಮಾರ್ಕ 14:26, 32-42; ಲೂಕ 22:39-46; ಯೋಹಾನ 18:1, 2)

ಮೇಲುಪ್ಪರಿಗೆಯ ಅವಧಿಯು ಹಾಡುಗಳ ಆರಾಧನೆಯ ಮೂಲಕ ಮುಕ್ತಾಯವಾಯಿತು: "ಬಳಿಕ ಅವರು ಕೀರ್ತನೆಯನ್ನು ಹಾಡಿ ... ಹೊರಟು ಹೋದರು" (ಮತ್ತಾಯ 26:30; ನೋಡಿರಿ ಮಾರ್ಕ 14:26). ಸಾಂಪ್ರದಾಯಿಕವಾಗಿ, ಪಸ್ಕ ಹಬ್ಬವು "ಕೀರ್ತನೆಗಳನ್ನು ಹಾಡುವುದರಿಂದ[4] ಮುಕ್ತಾಯವಾಗುತ್ತಿತ್ತು (ಕೀರ್ತನೆ 115-118)."[5] ದೈವತ್ವದ ಭಾಗವಾಗಿರುವ ಕ್ರಿಸ್ತನೆ ಕೀರ್ತನೆಗಳಿಂದ ಪ್ರಭಾವಿತನಾಗಿರುವುದರಿಂದ (2 ಪೇತ್ರ 1:21) ಇದು ಒಬ್ಬ ಗೀತಕಾರನು ತನ್ನ ಸ್ವರಚನೆಯನ್ನು ಹಾಡುವಂತಿದೆ. ಯೇಸು ಮತ್ತು ಅಪೊಸ್ತಲರು ದೇವರಿಗೆ ತಮ್ಮ ಧನಿಗಳನ್ನು ಎತ್ತುವುದನ್ನು ನಿಮ್ಮ ಮನದಲ್ಲಿ ನೋಡಿರಿ ಸ್ತೋತ್ರದಲ್ಲಿ ಗಡುಸಾದ ಗಂಡುಧನಿಯು ಸಮ್ಮಿಶ್ರವಾಗುತ್ತಿರುವುದನ್ನು ಕೇಳಿರಿ. "ಯೆಹೋವನಿಗೆ ಕೃತಜ್ಞತಾಸ್ತುತಿಮಾಡಿರಿ; ಆತನು ಒಳ್ಳೆಯವನು; ಆತನ ಕೃಪೆಯು ಶಾಶ್ವತವು" ಎಂದು ಆರಂಭವಾಗುತ್ತಿದ್ದಂತ ಅವರು ಹಾಡಿದ ಹಾಡು ಬಹುಶಃ ಅಂತಿಮವಾದ ಕೀರ್ತನೆಯು ಅದಾಗಿರಬಹುದಾಗಿರ ಬಹುದು (ಕೀರ್ತನೆ 118:1). "ಶಿಲುಬೆಯ ನೆರಳು ಕ್ರಿಸ್ತನಲ್ಲಿಯ ಸ್ತೋತ್ರವನ್ನು ಮುರುಟಿಸಲಿಲ್ಲ."[6]

ಬೋಧಕನು, ತನ್ನ ಅಪೊಸ್ತಲರೊಡನೆ, ಇಕ್ಕಟ್ಟಾದ ಓಣಿಗಳ ಮಧ್ಯ ಹಾದುಹೋದನು. ಕಿದ್ರೋನ್ ಕೊಳ್ಳವನ್ನು[7] ದಾಟಿದನು, ಮತ್ತು ಎಣ್ಣೆಮರಗಳ ಗುಡ್ಡದ ಏರನ್ನು ಆರಂಭಿಸಿದನು (ಯೋಹಾನ 18:1; ಲೂಕ 22:39). ಅವರು "ಗೆತ್ಸೆಮನೆ ಎಂಬ ತೋಟಕ್ಕೆ"[8] (ಮತ್ತಾಯ 26:36; ನೋಡಿರಿ ಮಾರ್ಕ 14:32) ಬಂದರು. "... ಅದು ಒಂದು ತೋಟವಾಗಿದ್ದು ಯೇಸುವೂ ಆತನ ಶಿಷ್ಯರು ಆಗಾಗ್ಗೆ ಕೂಡುತ್ತಾ ಇದ್ದ ಸ್ಥಳ ಅದಾಗಿತ್ತು ..." (ಯೋಹಾನ 18:1, 2; ನೋಡಿರಿ ಲೂಕ 21:37). ಆಗಾಗ್ಗೆ ಕೂಡುವ ಸ್ಥಳವಾಗಿದ್ದು, ಎಪ್ಪತ್ತು ಚದುರ ಮೈಲಿ ಅಳತೆಯನ್ನು ಹೊಂದಿದ್ದು ಎಪ್ಪತ್ತೈದು ಅಥವಾ ಅದಕ್ಕಿಂತ ಹೆಚ್ಚಿನ ಗಂಟುಳ್ಳ ಎಣ್ಣೆಮರಗಳನ್ನು ಹೊಂದಿರುವುದಾಗಿತ್ತು.[9] "ಗೆತ್ಸೆಮನೆ" ಇದು ಗ್ರೀಕ್ ಭಾಷಾಂತರದ ಪದವಾಗಿದ್ದು (ಇಬ್ರಿಯ ಅಥವಾ ಅರಮಾಯ ಭಾಷೆಯಿಂದ ಎರವಲು ಪಡೆದಿದ್ದಾಗಿದೆ) ಇದರ ಅರ್ಥ "ಎಣ್ಣೆಯ ಗಾಣ" ಎಂದಾಗಿದೆ. ಸಹಜವಾಗಿ ಎಣ್ಣೆ ಮರಗಳು ಸುಗ್ಗಿಯಲ್ಲಿ ಎಣ್ಣೆಯ ಗಾಣವು ಇರುವ ಸ್ಥಳವನ್ನು ಸೂಚಿಸುವುದರಿಂದ ಈ ಬೆಟ್ಟಕ್ಕೆ ಆ ಹೆಸರು ಬಂದಿರಬಹುದು.

ಕ್ರಿಸ್ತನು ತನ್ನ ಎಂಟು ಮಂದಿ ಅಪೊಸ್ತಲರನ್ನು ಬಿಟ್ಟು (ನೋಡಿರಿ ಮತ್ತಾಯ 26:36) "ಶೋಧನೆಗೆ ಒಳಗಾಗದಂತೆ ಪ್ರಾರ್ಥಿಸಿರಿ" ಎಂದು ಎಚ್ಚರಿಸಿದನು (ಲೂಕ 22:40). ನಂತರ ಪೇತ್ರ ಯಾಕೋಬ ಮತ್ತು ಯೋಹಾನರನ್ನು ಕರೆದುಕೊಂಡು (ಮತ್ತಾಯ 26:37; ಮಾರ್ಕ 14:33), ನೆರಳಿನಲ್ಲಿ ಆತನು ತಂದೆಯನ್ನು ಅಗ್ರಹಿಸಿದನು.[10] ಮುಂದಿರುವ ದೈಹಿಕ ಮತ್ತು ಆತ್ಮೀಕ ತಾಪದಿಂದ ಆತನು ಸೆದೆಬಡಿಯಲ್ಪಟ್ಟಿದ್ದನು. ಆತನು "ಬೆಚ್ಚಿ ಬೆರಳಿಗಾಗಿ ಮನಗುಂದಿದವನಾದನು" (ಮಾರ್ಕ 14:33). ಆತನು ಮೂವರು ಸ್ನೇಹಿತರಿಗೆ "ನನ್ನ ಪ್ರಾಣವು ಸಾಯುವಷ್ಟು ದುಃಖಕ್ಕೆ ಒಳಗಾಗಿದೆ ... ; ನೀವು ಇಲ್ಲೆ ಇದ್ದು ನನ್ನ ಸಂಗಡ

ಎಚ್ಚರವಾಗಿರ್ರಿ" ಎಂದು ಹೇಳಿದನು (ಮತ್ತಾಯ 26:38).

ಮುಂದೆ ಆತನು ತೋಟದೊಳಕ್ಕೆ ಹೋದನು, ನಂತರ ಬೋರಲು ಬಿದ್ದು[11] "ನನ್ನ ತಂದೆಯೇ, ಸಾಧ್ಯವಾದರೆ ಈ ಪಾತ್ರೆಯು ನನ್ನನ್ನು ಬಿಟ್ಟು ಹೋಗಲಿ" ಎಂದು ಹೇಳುತ್ತಾ ಪ್ರಾರ್ಥಿಸಿದನು (ಮತ್ತಾಯ 26:39; ನೋಡಿರಿ ಮಾರ್ಕ 14:35, 36; ಲೂಕ 22:42). "ಈ ಪಾತ್ರೆ"[12] ಎಂದು ಸೂಚಿತವಾದ ಪದವು ಆತನ ಆಂತ್ರಣವನ್ನು ಮತ್ತು ಇದು ಎಲ್ಲವೂ ನಿತ್ಯವಾದದ್ದೇ ಎಂದು ಸೂಚಿಸುವಂಥದ್ದು ಆಗಿದೆ. ನಂತರ ಆತನು "ಹೇಗೋ, ನನ್ನ ಚಿತ್ತದಂತಲ್ಲ ನಿನ್ನ ಚಿತ್ತದಂತೆಯೇ ಆಗಲಿ" (ಮತ್ತಾಯ 26:39) ಎಂದು ಸೇರಿಸಿದನು.

ಆತನು ಪೇತ್ರ, ಯಾಕೋಬ ಮತ್ತು ಯೋಹಾನರತ್ತ ಮರಳಿದಾಗ ಅವರು ನಿದ್ರೆಯಲ್ಲಿರುವದನ್ನು ಕಂಡನು (ಮತ್ತಾಯ 26:40). "ಒಂದು ಗಳಿಗೆಯಾದರು ಎಚ್ಚರವಾಗಿರಲಾರೆಯಾ?" ಎಂದು ಕೇಳುವಾಗ ಆತನ ಧ್ವನಿಯು ನಿರಾಶೆಯಿಂದ ಏರುಪೇರಾಗಿರಬಹುದು (ಮಾರ್ಕ 14:37).

ಕ್ರಿಸ್ತನು ಪಾರ್ಥನೆಗಾಗಿ ಮರಳಿ ತೋಟದ ಹೃದಯಭಾಗಕ್ಕೆ ಹೋದನು ಮತ್ತು ಪ್ರಾರ್ಥಿಸುವುದನ್ನು ಮುಂದುವರೆಸಿದನು: "ನನ್ನ ತಂದೆಯೇ, ನಾನು ಕುಡಿದ ಹೊರತು ಈ ಪಾತ್ರೆ ಬಿಟ್ಟು ಹೋಗಕೂಡದಾಗಿದ್ದರೆ ನಿನ್ನ ಚಿತ್ತವೇ ಆಗಲಿ" (ಮತ್ತಾಯ 26:42). ಆತನು ಎದ್ದು ತಿರುಗಿ ಮೂವರು ಶಿಷ್ಯರ ಬಳಿಗೆ ಮರಳಿದಾಗ ತಿರುಗಿ ಅವರು ನಿದ್ರೆಯಲ್ಲಿರುವದನ್ನು ಕಂಡನು (ಮತ್ತಾಯ 26:43). ಆತನು ಅವರು ಯಾಕೆ ಎಚ್ಚರವಾಗಿಲ್ಲ ಎಂದು ಕೇಳಿದ್ದಕ್ಕೆ[13] "ಆತನು ಕೇಳಿದ್ದಕ್ಕೆ ಏನು ಉತ್ತರ ಕೊಡಬೇಕೋ ಅವರಿಗೆ ತಿಳಿಯಲಿಲ್ಲ" (ಮಾರ್ಕ 14:40). ಅವರು ಎಚ್ಚರವಿರುವದಕ್ಕಾಗಿನ ತಮ್ಮ ಅಸಾಮರ್ಥ್ಯದಿಂದ ಅವರು ಮುಜುಗರಕ್ಕೀಡಾದರು ಹೇಗೆ ಕ್ಷಮೆ ಕೇಳಬೇಕೆಂದು ತಿಳಿಯದಾದರು. ಲೂಕನು ಅವರಿಗೆ "ದುಃಖಭಾರದಿಂದ ನಿದ್ರೆ ಹತ್ತಿತ್ತು" ಎಂದು ವಿವರಿಸಿದರೆ (ಮಾರ್ಕ 14:40). ಮಾರ್ಕನು "ಅವರ ಕಣ್ಣುಗಳು ಬಹುಭಾರವಾಗಿದ್ದವು" ಎಂದು ಗಮನಿಸುತ್ತಾನೆ[14] (ಲೂಕ 22:45).

ಯೇಸು ಪೇತ್ರ, ಯಾಕೋಬ ಮತ್ತು ಯೋಹಾನರನ್ನು ಬಿಟ್ಟು ಹೊರಟೊಡನೆಯೇ ಅವರು ನಿದ್ರೆಗಾಗಿ ಮಲಗಿಕೊಳ್ಳುವ ಈ ಚಿತ್ರಣವನ್ನು ನಿಮ್ಮ ಮನದಲ್ಲಿ ಇರಿಸಿಕೊಳ್ಳಿರಿ. ಬದಲಾಗಿ ನಿದ್ರೆಗಾಗಿ ಹೋರಾಡುತ್ತಾ ಅದರ ಯುದ್ಧದಲ್ಲಿ ಸೋತವರಂತೆ, ಅವರ ಕಣಿವೆಗಳು ಭಾರವಾಗುತ್ತಿರುವಂತೆ ಮತ್ತು ಅವರು ನೆಲದ ಮೇಲೆ ಕುಸಿಯುವವರೆಗೂ ಭಾರವಾಗಿಯೇ ಇರುವುದನ್ನು ನೋಡಿರಿ. ಹೌದು, ಅವರು ಎಚ್ಚರದಿಂದ ಇರಬೇಕಾಗಿತ್ತು. ಆದರೆ ದೈಹಿಕವಾಗಿ ಮತ್ತು ಭಾವನಾತ್ಮಕವಾಗಿ ಅವರು ಬಹುವಾಗಿ ದಣಿದುಹೋಗಿದ್ದರು.

ಮೂರನೇಯ ಸಾರಿ, ಯೇಸು ಅವರನ್ನು ಬಿಟ್ಟುಹೋದನು ಮತ್ತು ಪ್ರಾರ್ಥನೆಯಲ್ಲಿ ನಿರತನಾದನು: "ಆತನು ಮನೋವ್ಯಥೆಯುಳ್ಳವನಾಗಿ ಇನ್ನೂ ಆಸಕ್ತಿಯಿಂದ ಪ್ರಾರ್ಥಿಸುತ್ತಿರಲಾಗಿ ಆತನ ಬೆವರು ಭೂಮಿಗೆ ಬೀಳುತ್ತಿರುವ ರಕ್ತದ ದೊಡ್ಡಹನಿಗಳೋ ಪಾದಿಯಲ್ಲಿತ್ತು" (ಲೂಕ 22:44). "ಬಲವಾಗಿ ಕೂಗುತ್ತಾ ಕಣ್ಣೀರನ್ನು ಸುರಿಸುತ್ತಾ ಪ್ರಾರ್ಥನೆ ವಿಜ್ಞಾಪನೆಗಳನ್ನು ಸಮರ್ಪಿಸಿದನು" ಎಂದು ಇಬ್ರಿಯ ಪುಸ್ತಕದ ಲೇಖಕನು ಬರೆಯುತ್ತಾನೆ (ಇಬ್ರಿಯ 5:7). ಆತನ ಪ್ರಾರ್ಥನೆಗೆ ಉತ್ತರವಾಗಿ "ಒಬ್ಬ ದೇವದೂತನು ಆತನಿಗೆ ಕಾಣಿಸಿಕೊಂಡು ಆತನನ್ನು ಬಲಪಡಿಸಿದನು" (ಲೂಕ 22:43).[15]

ಮೂರನೆಯ ಸಾರಿ ಕ್ರಿಸ್ತನು ತನ್ನ ಶಿಷ್ಯರೆಡೆಗೆ ಮರಳಿದಾಗ, ಆತನ ಅಂತರ್ಯವು ದುಮ್ಮಾನದಿಂದ ಮುಚ್ಚಿಹೋಗಿತ್ತು. ಆತನು ತನ್ನ ಶಿಷ್ಯರಿಗೆ "ನೀವು ಇನ್ನು ನಿದ್ದೆ ಮಾಡಿ ದಣುವಾರಿಸಿಕೊಳ್ಳಿರಿ;[16] ಇಗೋ, ಇಳಿಗೆ ಸಮೀಪಿಸಿತು, ಈಗ ಮನುಷ್ಯಕುಮಾರನು ದುರ್ಜನರ ಕೈಗೆ ಒಪ್ಪಿಸಲ್ಪಡುತ್ತಾನೆ[17] ... ನನ್ನನ್ನು ಹಿಡುಕೊಡುವವನು ಹತ್ತಿರಕ್ಕೆ ಬಂದಿದ್ದಾನೆ ನೋಡಿರಿ!" ಎಂದು ಹೇಳಿದನು (ಮತ್ತಾಯ 26:45, 46).

## ಪೈಶಾಚಿಕ ಸೆರೆಹಿಡಿಯುವಿಕೆ
## (ಮತ್ತಾಯ 26:47-56; ಮಾರ್ಕ 14:43-52;
## ಲೂಕ 22:47-53; ಯೋಹಾನ 18:2-11)

ಕ್ರಿಸ್ತನು ಮಾತನಾಡುತ್ತಿರುವಂತೆಯೇ ಜನಸಮೂಹವು ತೋಟದೊಳಕ್ಕೆ ಕೂಡಿತು - ಬಹುಶಃ ಅಲ್ಲಿ ನೂರಾರು ಜನರು ಇರಬಹುದು (ನೋಡಿ ಮತ್ತಾಯ 26:47; ಮಾರ್ಕ 14:43ಎ; ಲೂಕ 22:47). ಈ ಕೊಲೆಗಡುಕ ಜನಸ್ತೋಮವು ಯೂದನಿಂದ ನಡೆಸಲ್ಪಟ್ಟಿತ್ತು.[18]

ಇತರ ಶಿಷ್ಯರೂ ಮಲಗಿರಬಹುದು, ಆದರೆ ಯೂದರನು ಮಲಗಿರಲಿಲ್ಲ. ಮಹಾಸಭೆಯೊಡನೆ ತನ್ನ ಒಪ್ಪಂದವನ್ನು ಸಂಪೂರ್ಣಗೊಳಿಸಲು, ಆತನು ಅವರನ್ನು ತನ್ನ ಗುರುವಿರುವಲ್ಲಿ ನಡೆಸಿದನು (ನೋಡಿ ಅಪೊಸ್ತಲರ ಕೃತ್ಯಗಳು 1:16), ಬಹುಶಃ ಆತನು ಮೊದಲು ಮೇಲುಪ್ಪರಿಗೆ ಕೋಣೆ ಯಲ್ಲಿ ಪರೀಕ್ಷಿಸಿರಬಹುದು.[19] ಕೊನೆಗೂ, ಯೇಸು ಹಲವು ಬಾರಿ ಆತನನ್ನು ಮತ್ತು ಇತರ ಅಪೊಸ್ತಲರನ್ನು ಸೇರಿಸುತ್ತಿದ್ದ ಎಣ್ಣೆಮರದ ಗುಡ್ಡದ ಸ್ಥಳಕ್ಕೆ ಆತನು ಕ್ರಿಸ್ತನ ವೈರಿಗಳನ್ನು ನಡೆಸಿದನು (ಯೋಹಾನ 18:2).

ಯೂದನು "ಮಹಾಯಾಜಕರು ಮತ್ತು ಶಾಸ್ತ್ರಿಗಳು ಜನರ ಹಿರಿಯರುಗಳು" ಇರುವ "ದೊಡ್ಡ ಗುಂಪಿನಿಂದ ಸುತ್ತುವರೆಯಲ್ಪಟ್ಟಿದ್ದನು" (ಮತ್ತಾಯ 26:47; ಮಾರ್ಕ 14:43) ಅದು ಮಹಾ ಸಭೆಯಾಗಿತ್ತು.[20] ಆ ಗುಂಪು "ದೇವಾಲಯದ ಕಾವಲು ದಳ" "ಮಹಾಯಾಜಕರುಗಳಿಂದ" ಕೂಡಿತ್ತು (ಲೂಕ 22:52; ಯೋಹಾನ 18:3). ಇವರು ದೇವಾಲಯದ ಯೆಹೂದಿ ಸುರಕ್ಷಾದಳದ ನಾಯಕರುಗಳು ಆಗಿದ್ದು,[21] ಮಹಾಸಭೆಯಿಂದ ನೋಡಿಕೊಳ್ಳಲ್ಪಡುತ್ತಿದ್ದರು. ಬಲು ಆಶ್ಚರ್ಯಕರ ಸಂಗತಿ ಎಂದರೆ ಈ ಗುಂಪು ರೋಮನ್ ಸೈನಿಕರ ದೊಡ್ಡ ತುಕಡಿಯನ್ನು ಹೊಂದಿತ್ತು. ಸನ್ಹದ್ರಿನ್ ಸೆರೆಹಿಡಿಯುವುದಕ್ಕೆ ರೋಮನ್ನರಿಗೆ ಸಹಾಯ ಮಾಡುವದು ಎಂದು ತೋರಿಕೆಗೆ ಕರೆಯಲ್ಪಡುತ್ತಿತ್ತು.[22] ಯೋಹಾನನ ಪ್ರಕಾರ ಯೇಸುವನ್ನು ಹಿಡಿಯುವುದಕ್ಕೆ ಅವರಲ್ಲಿ ನಾಯಕತ್ವವನ್ನು ವಹಿಸಿದವರು "ರೋಮನ್ ಸಿಪಾಯಿಗಳು ಸಹಸ್ರಾದಿಪತಿಗಳು" ಆಗಿದ್ದರು (ಯೋಹಾನ 18:12; ನೋಡಿರಿ ವಚನ 3). ರೋಮನ್ ಸಿಪಾಯಿದಳವು ಸಾಮಾನ್ಯವಾಗಿ ಆರನೂರು ಸೈನಿಕರನ್ನು ಹೊಂದಿತ್ತು.[23] ಯೇಸುವನ್ನು ಹಿಡಿಯಲು ಈ ರೀತಿಯ ಅನೇಕರು ಬಂದಿರುವದು ಅಸಂಭವನೀಯವಾದದ್ದು ಆಗಿದೆ; ಆದರೆ ಮತ್ತಾಯ ಹೇಳಿಕೆಯ ಪ್ರಕಾರ, "*ದೊಡ್ಡ* ಗುಂಪು" ತೋಟದೊಳಕ್ಕೆ ಬಂದಿತು (ಮತ್ತಾಯ 26:47; ಒತ್ತಿ ಹೇಳಿದ್ದು ನನ್ನದು), ಬಹುಶಃ ನೂರುಗಟ್ಟಲೆ ಸೈನ್ಯದಳವು ಅಲ್ಲಿ ಉಪಸ್ಥಿತವಿರಬಹುದು. ಇವರು ಮತ್ತು ಉಳಿದದ್ದು ಜನಸಮೂಹವು "ಕತ್ತಿ ದೊಣ್ಣೆಗಳಂಥ" "ಶಸ್ತ್ರಾಸ್ತ್ರದಿಂದ" ಕೂಡಿದವರಾಗಿ ಬಂದಿದ್ದರು (ಯೋಹಾನ 18:3; ಮತ್ತಾಯ 26:47, 55; ಮಾರ್ಕ 14:43, 48; ಲೂಕ 22:52).[24]

ಒಬ್ಬ ಮನುಷ್ಯನನ್ನು ಸೆರೆಹಿಡಿಯಲು ಅನೇಕ ಜನರು ಯಾಕೆ ಕಳಿಸಲ್ಪಟ್ಟರು? ಬಹುಶಃ ಅವರಿಗೆ ಆ "ಮನುಷ್ಯನು ಎಂದಿಗೂ ಸೆರೆಹಿಡಿಯಲ್ಪಡುವುದಿಲ್ಲ" ಎಂದು ಅವರಿಗೆ ಹೇಳಲ್ಪಟ್ಟಿತು (ನೋಡಿರಿ ಯೋಹಾನ 7:30, 44; 10:39). ಅದ್ಭುತ ಕಾರ್ಯಗಳನ್ನು ಮಾಡುವವ ಎಂಬ ಆತನ ಖ್ಯಾತಿಯನ್ನು ನಿಸ್ಸಂಶವಾಗಿ ಅವರು ತಿಳಿದಿದ್ದರು; ಆತನು ತನ್ನ ಒಂದು ಮಾತಿನಿಂದ ಅಂಜೂರದ ಮರವು ಒಣಗುವಂತೆ ಮಾಡಿದ್ದನ್ನು ಕೂಡಾ ಅವರು ತಿಳಿದಿದ್ದರು (ನೋಡಿರಿ ಮತ್ತಾಯ 21:19). ಕಾರಣವು ಏನೇ ಇರಲಿ, ನೂರಾರು ಶಸ್ತ್ರಸಜ್ಜಿತರು ಯಾರೊಬ್ಬರಿಗೂ ತೊಂದರೆ ಕೂಡದ, ತನ್ನ ಶಿಷ್ಯರಿಗೆ ಇನ್ನೊಂದು ಕೆನ್ನೆಯನ್ನು ಒಡ್ಡಲು ಬೋಧಿಸಿದ ವ್ಯಕ್ತಿಯನ್ನು ಸೆರೆಹಿಡಿಯಲು ಬರುತ್ತಿರುವುದು ಇದು ಅಸಮಂಜಸವಾದ ದೃಶ್ಯ (ಮತ್ತಾಯ 5:39).

ಆತನ ಕೆನ್ನೆಗೆ ಮುತ್ತು ಕೊಟ್ಟು ಶಿಷ್ಯರು ತಮ್ಮ ಗುರುವನ್ನು ವಂದಿಸಲು ಮಾಡುವ ಮೂಲಕ ಜನಸಮೂಹವು ಯೇಸುವನ್ನು ಗುರುತು ಹಿಡಿಯಲೆಂದು ಯೂದನು ಮೊದಲೇ

ಸೂಚನೆಯ ವ್ಯವಸ್ಥೆಮಾಡಿದ್ದನು (ಮತ್ತಾಯ 26:48; ಮಾರ್ಕ 14:44). ಇಂಥ ನಾಟಕದ ಅವಶ್ಯಕತೆಯನ್ನು ಯೇಸು ಮೊದಲೇ ವರ್ಣಿಸಿದನು. ಆತನು "ನೀವು ಯಾರನ್ನು ಹುಡುಕುತ್ತೀರಿ?" ಎಂದು ಕೇಳಿದನು (ಯೋಹಾನ 18:4). ಅವರು "ನಜರೇತಿನ ಯೇಸುವನ್ನು ಹುಡುಕುತ್ತೇವೆ" ಅನ್ನಲು, ಆತನು "ನಾನೇ ಅವನು" ಎಂದು ಧೈರ್ಯವಾಗಿ ಉತ್ತರಿಸಿದನು (ಯೋಹಾನ 18:5).

ಆತನು ತಾನೇ ಸೆರೆಹಿಡಿಯಲ್ಪಡುವವನು ಎಂದು ಹೇಳಿದಾಗ "ಅವರು ಹಿಂದಕ್ಕೆ ಸರಿದು ನೆಲದ ಮೇಲೆ ಬಿದ್ದರು" (ಯೋಹಾನ 18:6). ಅವರ ಹಿಂಜರಿಕೆಯು ದೇವರ ದಿವ್ಯಶಕ್ತಿಯ ಪ್ರಾಯೋಗಿಕವಾಗಿರಬಹುದು. ಹೆಚ್ಚಾಗಿ, ಆತನ ದಿವ್ಯ ಉಪಸ್ಥಿತಿಯ ಬೆಚ್ಚಿ ಬೀಳಿಸುವಂಥ ಪ್ರತಿಕ್ರಿಯೆಯು ಇದಾಗಿತ್ತು.[25] G. Hall ಹೀಗೆ ಬರೆಯುತ್ತಾರೆ. "ಆತನ ಮುಂದೆ ಅವರು ಭೀತಿಯುಳ್ಳವರೂ, ನಾಚಿಕೆಯಿಂದ ಕೂಡಿದವರೂ, ಮತ್ತು ಅಭದ್ರತೆಯುಳ್ಳವರೂ ಆದರು. ಬಿಳಿಯ ಬೆಳಕಿನ ಆತನ ಪರಿಶುದ್ಧತೆಯು ಅವರ ಮನದಲ್ಲಿ ದೋಷದ ಅರಿವನ್ನು ಮುಡಿಸಿತು ... ಅವರು ಅವನ ಮೇಲೆ ಉಪಾಯಮಾಡಲು ಹವಣಿಸುತ್ತಿರುವಂತೆಯೇ ಆತನು ಅವರನ್ನು ಆ ಉಪಾಯದಲ್ಲಿ ಕೆಡವಿಕೊಡನು."[26]

ಬೆಪ್ಪಾದ ಜನಸಮೂಹಕ್ಕೆ ಯೇಸು ಇದು ಒಂದು ನಿಯೋಗ ಎಂದು ನೆನಪಿಸಿದನು. ತಿರುಗಿ ಆತನು "ನೀವು ಯಾರನ್ನು ಹುಡುಕುತ್ತೀದ್ದೀರಿ?" ಎಂದು ಕೇಳಿದನು. "ನಜರೇತಿನ ಯೇಸುವನ್ನು" ಎಂದು ಅವರು ಪುನರುಚ್ಚರಿಸಿದರು (ಯೋಹಾನ 18:7). "ನಾನೇ ಅವನೆಂದು ನಿಮಗೆ ಹೇಳಿದ್ದನಲ್ಲಾ" ಎಂದು ಯೇಸು ತಿರುಗಿ *ಹೇಳಿದನು* (ಯೋಹಾನ 18:8ಎ; ಒತ್ತಿ ಹೇಳಿದ್ದು ನನ್ನದು). ನಂತರ ಹನ್ನೊಂದು ಮಂದಿಯನ್ನು ಸೂಚಿಸಿ, "... ನೀವು ನನ್ನನ್ನು ಹುಡುಕುವಿರಾದರೆ ಇವರು ಹೋಗಬಿಡಿರಿ" ಎಂದು ಸೇರಿಸಿದನು (ಯೋಹಾನ 18:8). ಆತನಿಗೆ ತನ್ನ ಸ್ವಂತದ ಸುರಕ್ಷತೆಯ ಬಗ್ಗೆ ಲಕ್ಷವಿರಲಿಲ್ಲ, ಆತನು ತನ್ನ ಶಿಷ್ಯರ ಯೋಗಕ್ಷೇಮದ ಬಗ್ಗೆ ಹೆಚ್ಚಾಗಿ ಯೋಚಿಸುವವನಾಗಿದ್ದನು.

ಕರ್ತನು ಎರಡು ಬಾರಿ ತನ್ನನ್ನು ಗುರುತಿಸಿಕೊಂಡಿದ್ದರಿಂದ "ಈಗ ಯೂದನು ಮುಂಚೆಯೇ ಯೋಜಿಸಿದ ಯೋಜನೆಯು ಸೂಚನೆಯು ಅಲ್ಪ ಉದ್ದೇಶದ್ದಾಗಿತ್ತು ಆದರೆ ಈ ಮಾಜಿ ಶಿಷ್ಯನು ಹಣವನ್ನು ಸಂಪಾದಿಸಲು ದೃಢಮನಸ್ಸುಳ್ಳವನಾಗಿದ್ದನು. ಆತನು ಯೇಸುವಿನ ಬಳಿಬಂದನು ಮತ್ತು ಗುರುವೇ ನಮಸ್ಕಾರ! ಎಂದು ಹೇಳಿ ಆತನಿಗೆ ಮುದ್ದಿಟ್ಟನು" (ಮತ್ತಾಯ 26:49). ಕ್ರಿಸ್ತನು ದುಃಖದಿಂದ ಆತನಿಗೆ "ಯೂದನೇ ಮುದಿಟ್ಟು ಮನುಷ್ಯಕುಮಾರನನ್ನು ಹಿಡಿದುಕೊಡುತ್ತೀಯಾ?" ಎಂದು ಕೇಳಿದನು (ಲೂಕ 22:48). ನಂತರ ಆತನು "ಗೆಳೆಯನೇ[27] ನೀನು ಬಂದ ಕೆಲಸ ಇದೆಯೋ?" ಎಂದು ಸೇರಿಸಿದನು (ಮತ್ತಾಯ 26:50).

ಯೂದನು ಯೇಸುವನ್ನು ಸಮೀಪಿಸುವಾಗ ಯಾವ ಅದ್ಭುತಕಾರ್ಯವು ನೆರವೇರಬಹುದು? ಎಂದು ಜನರ ಗುಂಪು ಬಹುಶಃ ಆತಂಕದಿಂದ ನೋಡುತ್ತಿರಹುದು. ಯಾವ ವಿನಾಷವು ಯೂದನ ಮೇಲೆ ಬರದೆ ಇದ್ದಾಗ ಅವರ ಆತ್ಮವಿಶ್ವಾಸವು ಮರಳಿ ಬಂದಿತು. ಅವರು ಮುಂದಕ್ಕೆ ಬಂದರು. "ಮತ್ತು ಯೇಸುವಿನ ಮೇಲೆ ಕೈ ಹಾಕಿದರು" ಮತ್ತು "ಆತನನ್ನು ಹಿಡಿದರು" (ಮತ್ತಾಯ 26:50; ಯೋಹಾನ 18:12).[28] ಆ ಕ್ಷಣದಿಂದ ಆತನ ಮರಣದ ತನಕ ಯೇಸುವಿನ ಕೈಗಳು ಅಪರೂಪವಾಗಿ ಸ್ವತಂತ್ರವಾದವು: ಆತನ ಕೈಗಳು ಸಾಮಾನ್ಯವಾಗಿ ಜನರ ಗುಂಪಿನಿಂದಲೂ ಅಥವಾ ಮೊಳೆಯಿಂದಲೂ ನಿಯತವಾಗಿ ಇದ್ದವು (ಮಾರ್ಕ 15:1; ಯೋಹಾನ 18:12; 20:25).

ಯೇಸುವಿನ ಶಿಷ್ಯರು ಆತನೊಡನೆ ತಾವೂ ಮರಣಿಸುವ ಇಚ್ಛೆಯನ್ನು ದೃಢೀಕರಿಸಿದ್ದರು (ಮಾರ್ಕ 14:31). ಈಗ, ಅವರು, ತಮ್ಮ ವಾಗ್ದಾನವನ್ನು ಒಳ್ಳೆಯದನನ್ನಾಗಿ ಮಾಡಲು ಸಿದ್ಧರಾದರು (ಲೂಕ 22:49). ಪೇತ್ರನು ತನ್ನ ಕತ್ತಿಯನ್ನು ಹಿರಿದನು[29] "ಮಹಾಯಾಜಕನ ಆಳನ್ನು ಹೊಡೆದು ಆತನ ಬಲಗಿವಿಯನ್ನು ಕತ್ತರಿಸಿದನು"[30] (ಯೋಹಾನ 18:10). ಬಹುಶಃ ಆ

ಅಪೊಸ್ತಲನು ಆ ಆಳಿನ ತಲೆಯನ್ನು ಕಡೆಯಬೇಕೆಂದಿದ್ದನು ಆದರೆ ಆ ಮನುಷ್ಯನು ಒಮ್ಮಲೇ ಅಲ್ಲಿಂದ ಸರಿದಿರಬೇಕು. ಒಬ್ಬರು ಹೀಗೆ ಹೇಳುತ್ತಾರೆ. "ಕತ್ತಿಹಿಡಿದಾತನಂತಿದ್ದ ಪೇತ್ರನು ಒಳ್ಳೆಯ ಬೆಸ್ತನ ಕೆಲಸವನ್ನು ಮಾಡಿದನು."

ಯೇಸು ತಕ್ಷಣವೇ ಪ್ರತಿಕ್ರಯಿಸಿದನು, ಇಲ್ಲವಾದರೆ ಅಲ್ಲೊಂದು ದೊಂಬಿಯು ಆಗುತ್ತಿತ್ತು. ಆ ತೋಟದ ನೆಲವು ಪೇತ್ರ ಮತ್ತು ಇತರರ ರಕ್ತದಿಂದ ತೋಯ್ದುಹೋಗಬಹುದಿತ್ತು. ಕರ್ತನು ಪೇತ್ರನಿಗೆ ಕೂಗಿ "ಇಷ್ಟಕ್ಕೆ ಬಿಡಿರಿ" "ನಿನ್ನ ಕತ್ತಿಯನ್ನು ತಿರುಗಿ ಒರೆಯಲ್ಲಿ ಸೇರಿಸು ಕತ್ತಿ ಹಿಡಿದವರೆಲ್ಲರೂ ಕತ್ತಿಯಿಂದ ಸೂಯುವರು" ಎಂದು ಹೇಳಿದನು (ಲೂಕ 22:51; ಮತ್ತಾಯ 26:52). ಆತ್ಮೀಕ ಯುದ್ದಗಳು ಭೌತಿಕ ಆಯುಧಗಳಿಂದ ಹೋರಾಡಲ್ಪಡುವುದಿಲ್ಲ (2 ಕೊರಿಂಥ 10:3, 4; ನೋಡಿರಿ ಯೋಹಾನ 18:36). ಪೇತ್ರನ ಇಚ್ಛೆಯು ಒಳ್ಳೆಯದೇ ಆಗಿತ್ತು. ಆದರೆ "ಬಳಸಲ್ಪಟ್ಟ ಆಯುಧಗಳು ತಪ್ಪಾದ ಸಮಯದಲ್ಲಿ, ತಪ್ಪು ಉದ್ದೇಶದಿಂದ ತಪ್ಪು ಪ್ರೇರಣೆಗಾಗಿ ತಪ್ಪಾಗಿ ಬಳಸಲ್ಪಟ್ಟವು."[31]

ಸಮರ್ಥನೆಯು ಕ್ರಮವಾಗಿದ್ದದ್ದೇ ಆದರೆ, ಕತ್ತಿಹಿಡಿದವನಿಗಿಂತ ಹೆಚ್ಚು ಪ್ರಭಾವಶಾಲಿಯಾಗಿ ಇರುವವನಾಗಿದ್ದನು. ಆತನು ಪೇತ್ರನಿಗೆ "ನಾನು ನನ್ನ ತಂದೆಯನ್ನು ಬೇಡಿಕೊಳ್ಳಲಾರೆನೆಂದೂ ಬೇಡಿಕೊಂಡರೆ ಆತನು ನನಗೆ ಹನ್ನೆರಡುಗಣಗಳಿಗಿಂತ ಹೆಚ್ಚು ಮಂದಿ ದೇವದೂತರನ್ನು ಕಳುಹಿಸಿಕೊಡುವುದಿಲ್ಲವೆಂದು ನೆನಸುತ್ತೀಯಾ?" ಎಂದು ಕೇಳಿದನು (ಮತ್ತಾಯ 26:53). ಸಂಪೂರ್ಣಪ್ರಮಾಣದ ಸೈನ್ಯದಳ ಆರುಸಾವಿರ ಸೈನಿಕರನ್ನು ಹೊಂದಿತ್ತು. ಎಪ್ಪತ್ತೆರಡು ಸಾವಿರ ದೇವದೂತರ ಮುಂದೆ ಆತನನ್ನು ಸೆರೆ ಹಿಡಿಯಲು ಬಂದಿದ್ದ ಅನೇಕ ನೂರು ವೈರಿಗಳು ಏನೂ ಅಲ್ಲವಾಗಿ ಬಿಡುತ್ತಿದ್ದರು![32]

ಕ್ರಿಸ್ತನು "ಹನ್ನೆರಡು" ಎಂಬ ಪದವನ್ನು ಬಳಸಿದನು ಯಾಕೆಂದರೆ ಆತನು ಮತ್ತು ಆತನ ಹನ್ನೊಂದು ಮಂದಿ ಶಿಷ್ಯರೂ ಅದರಲ್ಲಿ ಸೇರಿಸಲ್ಪಟ್ಟಿದ್ದರು; ಒಂದು ಸೈನ್ಯದಳವು ಮತ್ತೊಂದನ್ನು ರಕ್ಷಿಸುವುದಾಗಿತ್ತು. ಬಹುಶಃ, ಆ ಅಂಕಿಯು ಕೇವಲ ಅಸಂಖ್ಯಾತವಾದ ದಳವನ್ನು ಸೂಚಿಸುವುದನ್ನು ಚಿತ್ರಿಸುವುದಾಗಿದೆ. ಕರ್ತನ ಅಂಶವು ಆತನು ಆತನು ಮುಂಚೆ ಮಾಡಿದ್ದಂತದ್ದೇ ಆಗಿತ್ತು: "ಯಾರೊಬ್ಬ ಮನುಷ್ಯನಾಗಲೀ ಯಾವುದೇ ತರದ ಜನರ ಗುಂಪಿಗಾಗಲೀ ಆತನ ಪ್ರಾಣವನ್ನು ಆತನಿಂದ ತೆಗೆಯುವ ಹಕ್ಕನ್ನು ಹೊಂದಿಲ್ಲ; ಬದಲಾಗಿ ಆತನು ಅದನ್ನು ತನ್ನಷ್ಟಕ್ಕೆ ತಾನೇ ತನ್ನ ಚಿತ್ತದಂತೆ ಕೊಡುವವನಾಗಿದ್ದನು" (ಯೋಹಾನ 10:17, 18; ನೋಡಿ ಗಲಾತ್ಯ 2:20).[33]

ಪೇತ್ರನಿಗೆ ಗದರಿಸುತ್ತಾ, ಯೇಸು ತನ್ನ ಕೈಯಿಂದ ಕಟ್ಟಲು ಆತನನ್ನು ತಲುಪಿದನು,[34] ಆಳಿನ ಗಾಯಗೊಂಡ ಕಿವಿಯನ್ನು ಮುಟ್ಟಿದನು "ಮತ್ತು ಆತನನ್ನು ಗುಣಪಡಿಸಿದನು"[35] (ಲೂಕ 22:51). ಆತನ ಕಾರ್ಯವು ಸಂಭವನೀಯ ವಿಷಮ ಪರಿಸ್ಥಿತಿಯನ್ನು ನಿರರ್ಥಕಗೊಳಿಸಿತು. ಇದು ಕರ್ತನ ಮರಣಕ್ಕಿಂತ ಮುಂಚಿನ ಆತನ ಕೊನೆಯ ಅದ್ಭುತಕಾರ್ಯವಾಗಿತ್ತು.

ಕ್ರಿಸ್ತನು ತನ್ನನ್ನು ಹಿಡುಕೊಳ್ಳುವವರತ್ತ ತಿರುಗಿದನು "ಕಳ್ಳನನ್ನು ಹಿಡಿಯುವುದಕ್ಕೆ ಬಂದಂತೆ ಕತ್ತಿಗಳನ್ನು ದೊಣ್ಣೆಗಳನ್ನೂ ತೆಗೆದುಕೊಂಡು ಬಂದಿರಾ? ನಾನು ದಿನಾಲು ನಿಮ್ಮ ಸಂಗಡ ಇದ್ದಾಗ ನೀವು ನನ್ನ ಮೇಲೆ ಕೈ ಹಾಕಲಿಲ್ಲ; ಆದರೆ ಇದು ನಿಮ್ಮ ಕಾಲ, ಇದು ಅಂಧಕಾರದ ದೊರೆತನ" ಎಂದು ಹೇಳಿದನು (ಲೂಕ 22:52, 53). ಈ ಹೇಳಿಕೆಯಲ್ಲಿನ ಅಂತಿಮ ಮಾತಿನ ಅರ್ಥವು "ಇದು ನಿಮ್ಮ ವಿಜಯದ ಗಳಿಗೆ, ಅಂಧಕಾರದ ಶಕ್ತಿಯು ಜಯಿಸುವ ಕಾಲವು ಇದು" ಎಂದಾಗಿದೆ.[36] NIVಯಲ್ಲಿ "ಇದು ಅಂಧಕಾರವು ಆಳುವಂಥ ನಿಮ್ಮ ಕಾಲ" ಎಂದಿದೆ.

ಈ ಸಮಯದಲ್ಲಿ, ವಾಸ್ತವವಾಗಿ ಯೇಸುವಿನ ಶಿಷ್ಯರೊಂದಿಗೆ ನಿಶ್ಚಿತವಾದ ಯಾವುದೇ ಭೌತಿಕ ಕಾದಾಟವು ಅಲ್ಲಿರಲಿಲ್ಲ. ನಿಷ್ಪಲಗೊಳಿಸುವಂತೆ, ಹತಾಶೆಯಿಂದ, ಗಲಿಬಿಲಿಯಿಂದ ಅವರು (ಶಿಷ್ಯರು) ಯೇಸುವನ್ನು ಬಿಟ್ಟರು ಮತ್ತು ಆತನು ಮುಂದಾಗಿ ಹೇಳಿದ್ದರೂ ಕೂಡಾ

ಓಡಿಹೋದರು (ಮತ್ತಾಯ 26:56; ನೋಡಿರಿ ವಚನ 31). ಪೇತ್ರ ಮತ್ತು ಯೋಹಾನರು "ಸ್ವಲ್ಪ ದೂರದಿಂದ" ಹಿಡುಕೊಂಡು ಹೋದವರನ್ನು ಹಿಂಬಾಲಿಸಿದರು (ಮತ್ತಾಯ 26:58; ಮಾರ್ಕ 14:54; ಲೂಕ 22:54; ನೋಡಿರಿ ಯೋಹಾನ 18:15); ಆದರೆ ಎಲ್ಲಾ ಪ್ರಾಯೋಗಿಕ ಅವಶ್ಯಕತೆಗಾಗಿ, ಕ್ರಿಸ್ತನು ಏಕಾಂಗಿಯಾಗಿದ್ದನು. (ಆತನು ಸಂಪೂರ್ಣ ಏಕಾಂಗಿಯಾಗಿರಲಿಲ್ಲ, ಯಾಕೆಂದರೆ ತಂದೆಯು ಆತನೊಡನೆ ಇದ್ದನು [ಯೋಹಾನ 16:32].)

ಮಾರ್ಕನ ವಿವರಣೆಯು ಬರಿಮೈ ಮೇಲೆ ನಾರುಮಡಿಯನ್ನು ಹೊತ್ತು ಬರುತ್ತಿದ್ದ ಒಬ್ಬ ಯೌವನಸ್ಥನು ಆತನನ್ನು ಜನರು ಹಿಡಿಯಲಾಗಿ ಆತನು ಬೆತ್ತಲೆಯಾಗಿ ಓಡಿಹೋದ ಬಗೆಗಿನ ಸೋಜಿಗದ ಸಂಗತಿಯನ್ನು ಒಳಗೊಂಡಿದೆ (ಮಾರ್ಕ 14:51, 52). ಆ ಯೌವನಸ್ಥನು ಮಾರ್ಕನೇ ಆಗಿದ್ದನು ಎಂದು ಅನೇಕ ಲೇಖಕರು ಅಭಿಪ್ರಾಯಪಡುತ್ತಾರೆ.[37] ಬಹುಶಃ ಇದು ಈ ವಿವರಣೆಯ ಸತ್ಯತೆಯನ್ನು ಸಾಕ್ಷಿಕರಿಸುವ ಮಾರ್ಕನ ರೀತಿಯೂ ಆಗಿರಬಹುದು; "ನಾನು ಅಲ್ಲಿದ್ದೆನು ಮತ್ತು *ಇದನ್ನು* ನಾನು ಬಲ್ಲೆನು" ಎಂದು ಸೂಚಿಸಲು ಆತನು ಬಯಸಿರಬಹುದು. ಇದರ ಬಗ್ಗೆ ಮಾರ್ಕನ ಉದ್ದೇಶವು "ಶಿಷ್ಯರನ್ನು ಕಠಿಣವಾಗಿ ತೀರ್ಪುಮಾಡಬೇಡಿರಿ. ನೀವು ಅಲ್ಲಿದ್ದದ್ದೇ ಆದರೆ ನೀವು ಸಹ ಅಲ್ಲಿಂದ ಓಡಿಹೋಗಿರುತ್ತಿದ್ದಿರಿ. ನಾನು ಬಲ್ಲೆನು ಯಾಕೆಂದರೆ *ನಾನು* ಅಲ್ಲೆದ್ದೆನು" ಎಂದು ಹೇಳುವುದಾಗಿರಬಹುದು.

## ವ್ಯಾಕುಲಮಯವಾದ ವ್ಯವಸ್ಥೆ
## (ಮತ್ತಾಯ 26:57, 59-68; ಮಾರ್ಕ 14:53, 55-65; ಲೂಕ 22:54, 63-65; ಯೋಹಾನ 18:12-14, 19-24)

ಕ್ರಿಸ್ತನು ತೋಟದಲ್ಲಿ ಸೆರೆಯಾದಾಗ ಇದು ಪ್ರಾಯಶಃ ಮಧ್ಯರಾತ್ರಿ ಅಥವಾ ನಂತರದ ಸಮಯವಾಗಿರಬಹುದು.[38] ಆತನು ಕತ್ತಲೆಯಲ್ಲಿಯಿದ್ದರೂ ಆತನು ಯೆರೂಸಲೇಮಿನ ಇಕ್ಕಟ್ಟಾದ ಓಣಿಯಲ್ಲಿ ಸೆರೆಗೆ ತೆಗೆದುಕೊಳ್ಳಲ್ಪಟ್ಟನು, ಕಟ್ಟಲ್ಪಟ್ಟನು. "ಅವರು ಆತನನ್ನು ಅನ್ನನೆಡೆಗೆ ಮೊದಲು ನಡೆಸಿದರು" (ಯೋಹಾನ 18:13ಎ).[39]

ಯೆಹೂದಿಗಳ ಮುಂದೆ ಮತ್ತು ನಂತರ ರೋಮನ್ನರ ಮುಂದೆ ಯೇಸು ಪರೀಕ್ಷೆಗೊಳಗಾದನು. ಆತನ ಪ್ರತಿ "ಪರೀಕ್ಷೆಯೂ" ಮೂರು ಹಂತಗಳನ್ನು ಒಳಗೊಂಡಿತ್ತು. ನಾನು "ಪರೀಕ್ಷೆಯ"ನ್ನು ವ್ಯಾಖ್ಯೆಯ ಗುರುತಾಗಿ ಇಡುತ್ತೇನೆ ಯಾಕೆಂದರೆ ಈ ಎರಡೂ ನ್ಯಾಯತೀರ್ಪಿನ ವಿಡಂಬನೆಯಾಗಿವೆ. ಯೆಹೂದಿಗಳು: ಆ "ಪರೀಕ್ಷೆಯು" ವಿಚಾರದಲ್ಲಿ ದೋಷ ಮತ್ತು ದೋಷರಹಿತತೆಯನ್ನು ಪರಿಗಣಿಸುವ ಯಾವ ಪರಿಶ್ರಮವು ಅಲ್ಲಿರಲಿಲ್ಲ. ಯೆಹೂದಿಯರ ನಾಯಕರುಗಳು ಈಗಾಗಲೇ ಯೇಸುವನ್ನು ಮರಣಕ್ಕೆ ಒಪ್ಪಿಸಿಬಿಟ್ಟಿದ್ದರು (ಯೋಹಾನ 11:47-53; ನೋಡಿರಿ ಮತ್ತಾಯ 26:4; ಮಾರ್ಕ 14:1); ಆದರೆ ಅವರ ಉದ್ದೇಶವು ಯೇಸು ನ್ಯಾಯವಂತನಲ್ಲ ಆದರೆ ಹಿಂದೆಯೇ ಒಪ್ಪಂದವಾದ ಅವರ ಸಮರ್ಥನೆಯನ್ನು ಪ್ರತಿಪಾದಿಸುವದನ್ನು "ಪ್ರಯತ್ನಿಸುವವನಾಗಿದ್ದಾನೆ" (ಮತ್ತಾಯ 26:59; ನೋಡಿರಿ ಮಾರ್ಕ 14:55).

ಯೆಹೂದಿಗಳ "ಪರೀಕ್ಷೆಯ" ಹಂತ ಒಂದು ಅನ್ನನಿಂದಾಗುವ ಪರೀಕ್ಷೆಯು ಆಗಿತ್ತು.[40] "ಅನ್ನನು ಕಾಯಫನ ಮಾವನೂ, ಮಹಾಯಾಜಕನೂ" ಆಗಿದ್ದನು (ಯೋಹಾನ 18:13ಬಿ). ಅನ್ಯ ಪ್ರತಿನಿಧಿಯಾದ ರೋಮನ್ Valerius Gratus ನಿಂದ ಕೆಳಕ್ಕಿಳಿಸಲ್ಪಡುವುದಕ್ಕಿಂತ ಮುಂಚೆ ಅನ್ನನು ಕ್ರಿ.ಶ. 6-15ರವರೆಗೆ ಮಹಾಯಾಜಕನಾಗಿದ್ದನು.[41] ನಿಯಮದ ಪ್ರಕಾರ ಹಿರಿಯಯಾಜಕನ ಕಾರ್ಯವು ಜೀವಿತಾವಧಿಯ ಸಮಯವನ್ನು ಹೊಂದಿದ್ದರಿಂದ ಅನ್ನನು ಅನೇಕರಿಂದ ಹಕ್ಕುದಾರನಾದ ಹಿರಿಯಯಾಜಕ ಎಂದು ಇನ್ನೂ ಅನೇಕರಿಂದ ಪರಿಗಣಿಸಲ್ಪಡುತ್ತಿದ್ದನು.[42] ಈ ರೀತಿ ಪರಿಗಣಿಸಲ್ಪಟ್ಟ ಪರಿಚ್ಛೇದದಲ್ಲಿ, ಅನ್ನ ಮತ್ತು ಕಾಯಫ

ಇಬ್ಬರೂ "ಹಿರಿಯ ಯಾಜಕರು" ಎಂದು ಸೂಚಿತವಾಗಿದ್ದಾರೆ (ಯೋಹಾನ 18:13, 19, 22, 24; ನೋಡಿರಿ ಅಪೊಸ್ತಲರ ಕೃತ್ಯಗಳು 4:6).[43] "ಹಿರಿಯ ಯಾಜಕನಾದ ಅನ್ನನ ಬಗ್ಗೆ *ಮತ್ತು* ಕಾಯಫನ ಬಗ್ಗೆ" ಲೂಕನು ಬರೆದಿದ್ದಾನೆ (ಲೂಕ 3:2; ಒತ್ತಿ ಹೇಳಿದ್ದು ನನ್ನದು).

ಕ್ರಿಸ್ತನು ಅನ್ನನ ಬಳಿಗೆ ಯಾಕೆ ಮೊದಲು ಕರೆದೊಯಲ್ಪಟ್ಟನೂ ಎಂಬುದರ ಬಗ್ಗೆ ನಮಗೆ ಖಚಿತವಾದ ವಿವರಣೆಯು ಇಲ್ಲ. ಆತನಿಗೆ ಮಾಜಿ ಹಿರಿಯಯಾಜಕ ಎಂಬ ಗೌರವವನ್ನು ಕೊಡುವುದಕ್ಕೋಸ್ಕರ ಆತನನ್ನು ಅಲ್ಲಿ ತೆಗೆದುಕೊಂಡು ಹೋಗಿರಬಹುದು (ಹೆರೋದನು ಹೇಳಿದನು; ಲೂಕ 23:8). ಆ ವೃದ್ಧನು ಯೇಸುವನ್ನು ನೋಡುವ ಬಯಕೆಯನ್ನು ರೂಪ ಕೊಡಲು ಸಹಾಯಿಸಬಹುದು ಎಂದು ಯೇಸುವಿನ ವೈರಿಗಳು ಯೋಚಿಸಿದ್ದರು. ಸಭಾಮಂದಿರದ ಸದಸ್ಯರು ಕೂಡಿಬಂದ ಸಮಯದಲ್ಲಿ ಇದು ಲಾಭದಾಯಕವಾದ ಸಂಗತಿ ಎಂದು ಪರಿಗಣಿಸಬಹುದಾಗಿತ್ತು.[44]

ಅನ್ನನು ಯೇಸುವಿನ ಶಿಷ್ಯರ ಬಗೆಗೆ ಮತ್ತು ಆತನ ಬೋಧನೆಯ ಬಗೆಗೆ ಹೀಗೆ ತೀರಾ ಸಾಮಾನ್ಯವಾದ ಮಾತಿನಿಂದ ತನ್ನ ವಿಚಾರಣೆಯನ್ನು ಪ್ರಾರಂಭಿಸಿದನು (ಯೋಹಾನ 18:19). "ನಾನು ಧಾರಾಳವಾಗಿ ಲೋಕದ ಮುಂದೆ ಮಾತಾಡಿದ್ದೇನೆ ... ಸಭಾಮಂದಿರಗಳಲ್ಲಿಯೂ ದೇವಾಲಯದಲ್ಲಿಯೂ ..." (ಯೋಹಾನ 18:20).[45] ಆತನು "ನನ್ನನ್ನು ಯಾಕೆ ವಿಚಾರಿಸುತ್ತೀ? ನಾನು ಏನೇನು ಮಾತನಾಡಿದೆನೋ ಅದನ್ನು ಕೇಳಿದವರಲ್ಲಿ ವಿಚಾರಿಸು; ನಾನು ಹೇಳಿದ್ದು ಇವರಿಗೆ ತಿಳಿದಿದೆಯಲ್ಲಾ" ಎಲ್ಲಿ ಉಪಸ್ಥಿತವಿರುವ ಕೆಲವರನ್ನು ಉದ್ದೇಶಿಸಿ ಆತನು ಹೇಳಿರಬಹುದು (ಯೋಹಾನ 18:21).

ಈ ಸಂಗತಿಯಲ್ಲಿ "ಹತ್ತಿರದಲ್ಲಿ ನಿಂತಿದ್ದ ಓಲೆಕಾರರಲ್ಲಿ ಒಬ್ಬನು 'ಮಹಾಯಾಜಕನಿಗೆ ಹೀಗೆ ಉತ್ತರ ಕೊಡುತ್ತೀಯಾ' ಎಂದು ಆತನ ಕೆನ್ನೆಗೆ ಒಂದು ಏಟು ಹಾಕಿದನು?" (ಯೋಹಾನ 18:22). ಇದು ಆ ದಿನ ತಾಳಿಕೊಂಡಂಥ ಕ್ರಿಸ್ತನ ದೈಹಿಕ ಹಿಂಸೆಯ ಆರಂಭವಾಗಿತ್ತು. ಅದಕ್ಕೆ ಯೇಸು "ನಾನು ಮಾತಾಡಿದ್ದರಲ್ಲಿ ಏನಾದರೂ ದೋಷವಿದ್ದರೆ ಆ ದೋಷ ಇಂಥದೆಂದು ಸಾಕ್ಷಿ ಹೇಳಿ; ನಾನು ಮಾತಾಡಿದ್ದು ಸರಿಯಾಗಿದ್ದರೆ ನನ್ನನ್ನು ಯಾಕೆ ಹೊಡೆಯುತ್ತೀ?" ಎಂದು ಉತ್ತರಿಸಿದನು (ಯೋಹಾನ 18:23). ಯೇಸು ಕೈಯಿಂದಾಗುವ ಸ್ವಯಂ ರಕ್ಷಣೆಯನ್ನು ನಿಷೇಧಿಸಿದ್ದನು ಹೊರತು ಬಾಯಿಂದ ಮಾಡಬಹುದಾದದ್ದನ್ನಲ್ಲ.[46]

ಮುಂದೆ, ಎರಡನೆಯ ಹಂತದ ಯೆಹೂದಿ "ಪರೀಕ್ಷೆಗಾಗಿ" "ಅನ್ನನು ಆತನನ್ನು ಕಟ್ಟಿಸಿ ಮಹಾಯಾಜಕನಾದ ಕಾಯಫನ ಬಳಿಗೆ ಕಳುಹಿಸಿಕೊಟ್ಟನು" (ಯೋಹಾನ 18:24).[47] ಕಾಯಫನ ಮನೆಯು ಅನ್ನನ ಮನೆಯ ಹತ್ತಿರವೇ ಇರುವ ಸಾಧ್ಯತೆಯು ಇರುವುದಾಗಿದೆ.[48] "ಒಬ್ಬ ಮನುಷ್ಯನು ಜನಕ್ಕೋಸ್ಕರ ಸಾಯುವದು ಹಿತಕರವೆಂದು ಯೆಹೂದ್ಯರಿಗೋಸ್ಕರ ಆಲೋಚನೆ ಕೊಟ್ಟಂಥವನು" ಕಾಯಫನು ಎಂದು ಯೋಹಾನನು ಗುರುತಿಸಿದ್ದಾನೆ (ಯೋಹಾನ 18:14; ನೋಡಿರಿ 11:49-52).

"ಮಹಾಯಾಜಕರು; ಹಿರಿಯರು ಶಾಸ್ತ್ರಿಗಳು ಹೀಗೀಸಭೆಯವರೆಲ್ಲರ" ಆ "ಮಹಾಸಭೆಯು" ಕಾಯಫನ ಮನೆಯ (ಲೂಕ 22:54) ಮೇಲುಪ್ಪರಿಗೆಯಲ್ಲಿ (ನೋಡಿರಿ ಮಾರ್ಕ 14:66) "ಒಟ್ಟಾಗಿ ಕೂಡಿ" (ಮಾರ್ಕ 14:53, 55) ಬಂದರು. ಯೇಸುವಿಗೆ ಮರಣದಂಡನೆಯನ್ನು ವಿಧಿಸುವುದಕ್ಕೆ ಕೆಲ ಮೂಲ ಅಂಶವನ್ನು ಕಂಡುಕೊಳ್ಳುವ ಉದ್ದೇಶ ಕ್ಕಾಗಿ, "ಕೊನೆಪಕ್ಷ ಮಹಾಸಭೆಯ, ಸದಸ್ಯರ ಅವಶ್ಯವಿರುವಷ್ಟು ಸಂಖ್ಯೆಯು ಆ ರಾತ್ರಿಯ ಅವಧಿಗೋಸ್ಕರ ಅವರನ್ನು ಒಟ್ಟಾಗಿರುವುದಕ್ಕೆ ತಂದಿತು."[49]

ಕ್ರಿಸ್ತನ ವೈರಿಗಳು ಒಂದು ಚಿಕ್ಕ ಕುಂದನ್ನು 3 1/2 ವರ್ಷದ ಆತನ ಜೀವಿತದಲ್ಲಿ ತಮ್ಮ ಪೂರ್ವಾಗ್ರಹ ಭೂತಗನ್ನಡಿಯನ್ನು ಹಿಡಿದು ಹುಡುಕಿದರು ಮತ್ತು ಅವರು "ಯಾವುದೇ ದೋಷವಿಲ್ಲದ್ದನ್ನು ಕಂಡುಕೊಂಡರು."[50] ಈಗ ಅವರು "ಆತನನ್ನು ಕೊಲ್ಲಿಸಬೇಕೆಂದು ಆತನ ಮೇಲೆ ಸುಳ್ಳು ಸಾಕ್ಷಿಯನ್ನು ಹುಡುಕಲು" ಪ್ರಯತ್ನಿಸುತ್ತಲೇ ಇದ್ದಾರೆ. "ಬಹು

ಮಂದಿ ಸಾಕ್ಷಿಗಳು ಬಂದು ನಿಂತರೂ ಏನೂ ಸಿಕ್ಕಲಿಲ್ಲ'' (ಮತ್ತಾಯ 26:59, 60; ನೋಡಿರಿ ವಿಮೋಚನಕಾಂಡ 20:16). ಅಲ್ಲಿನ ಸಮಸ್ಯೆಯೆಂದರೆ ಎಲ್ಲರೂ ಒಪ್ಪುವಂತಹ ಕಥೆಯನ್ನು ಹೊಂದಿದ ಯಾರಾದರೂ ಇಬ್ಬರ ಸಾಕ್ಷಿಯನ್ನು ಅವರು ಹುಡುಕಬೇಕಾಗಿತ್ತು (ಧರ್ಮೋಪದೇಶಕಾಂಡ 17:6; 19:15), ಆದರೆ ಸುಳ್ಳು ಸಾಕ್ಷಿಯೂ ಸಹಿತ "ಒಂದಕೊಂದು ಸರಿಬೀಳಲಿಲ್ಲ'' (ಮಾರ್ಕ 14:56).

ಕಡೆಗೆ ಇಬ್ಬರು "ಮುಂದೆ ಬಂದು 'ನಾನು ದೇವಾಲಯವನ್ನು ಕೆಡವಿಟ್ಟು ಮೂರು ದಿನಗಳಲ್ಲಿ ಕಟ್ಟಬಲ್ಲೆ ಎಂದು ಇವನು ಹೇಳಿದನು' '' (ಮತ್ತಾಯ 26:60, 61). ಕೆಲವು ವರ್ಷಗಳ ಹಿಂದೆ, ಸೂಚಕಕಾರ್ಯಗಳಿಗಾಗಿ ಯೇಸು ಯೆಹೂದ್ಯರಿಗೆ ಪ್ರತಿಕ್ರಯಿಸುತ್ತಾ "ಈ ದೇವಾಲಯವನ್ನು ಕೆಡವಿರಿ; ನಾನು ಅದನ್ನು ಮೂರು ದಿನಗಳಲ್ಲಿ ಎಬ್ಬಿಸುವೆನು'' ಎಂದು ಹೇಳಿದನು. ಇದು "ಆತನು ತನ್ನ ದೇಹವೆಂಬ ದೇವಾಲಯದ ವಿಷಯವಾಗಿ ಹೇಳಿದ್ದನು'' (ಯೋಹಾನ 2:19, 21). ಹೇಗೂ ತಾನು ದೇವಾಲಯವನ್ನು ನಾಶಮಾಡುವುದಾಗಿ ಆತನು ಹೇಳಿರಲಿಲ್ಲ. ಇಬ್ಬರು ಮನುಷ್ಯರು ಸುಳ್ಳು ಸಾಕ್ಷಿ ಹೇಳಿದರು. ಹೀಗೆ ಹೇಳಿದರೂ ಅವರ ಸಾಕ್ಷಿ ಒಂದಕ್ಕೊಂದು ಸರಿಬೀಳಲಿಲ್ಲ (ಮಾರ್ಕ 14:59).[51]

ಕಾಯಫನ ಮುಜುಗರವು ಹೆಚ್ಚಾಗಿ ಬೆಳದಿರಬಹುದು, ಕುಪಿತನಾಗಿ, ಆತನು ಯೇಸುವಿನೆಡೆಗೆ ತಿರುಗಿಕೊಂಡು "ನೀನೇನು ಉತ್ತರಹೇಳುವುದಿಲ್ಲವೋ? ಇವರು ನಿನ್ನ ಮೇಲೆ ಹೇಳುವ ಈ ಸಾಕ್ಷಿ ಏನು?'' ಎಂದು ಪ್ರಶ್ನಿಸಿದನು (ಮತ್ತಾಯ 26:62). ಕ್ರಿಸ್ತನು ಅದಕ್ಕೆ ಉತ್ತರಿಸಲಿಲ್ಲ. ಆದರೆ ಗಂಭೀರವಾದ ಶಾಂತತೆಯನ್ನು ಕಾದುಕೊಂಡನು (ಮತ್ತಾಯ 26:63; ನೋಡಿ ಯೆಶಾಯ 53:7; ಅಪೊಸ್ತಲರ ಕೃತ್ಯಗಳು 8:32, 35; 1 ಪೇತ್ರ 2:23).

ಹಿರಿಯ ಯಾಜಕನು ನಿರಾಶೆಯಿಂದ "ನಿನಗೆ ಜೀವಸ್ವರೂಪನಾದ ದೇವರ ಮೇಲೆ ಆಣೆ ಇಡುತ್ತೇನೆ; ನೀನು ದೇವಕುಮಾರನಾದ ಕ್ರಿಸ್ತನು ಹೌದೋ ಅಲ್ಲವೋ ಎಂಬುದನ್ನು ನಮಗೆ ಹೇಳಬೇಕು'' ಎಂದು ಹೇಳಿದನು (ಮತ್ತಾಯ 26:63). "ನಿನಗೆ ಜೀವಸ್ವರೂಪನಾದ ದೇವರ ಮೇಲೆ ಆಣೆ ಇಡುತ್ತೇನೆ'' ಎಂಬುದು ಒಬ್ಬ ವ್ಯಕ್ತಿಯನ್ನು ಆಣೆಯಡಿಗೆ ಇಡುವುದರ ಶ್ರೇಷ್ಟ ಯೆಹೂದಿ ಸೂತ್ರವಾಗಿತ್ತು.[52] NIVಯಲ್ಲಿ ಇದು "ನಿನಗೆ ಆಣೆ ಮಾಡುತ್ತೇನೆ'' ಎಂದಿದೆ.

ಯೇಸು ಉತ್ತರಿಸುವುದಕ್ಕೆ ಕಾಯಫನು ಅಲ್ಪ ವಿಶ್ವಾಸವನ್ನು ಹೊಂದಿದ್ದನು. ಆ ಸಮಾಜದಲ್ಲಿ, ಇಂದು ಅನೇಕರು ಮಾಡುವಂತೆ, ಅಪಾದನೆ ಒಳಗಾದವನು ತನ್ನ ಬಗ್ಗೆ ಪ್ರಮಾಣಿಕರಿಸಲು ಒತ್ತಾಯಿಸಲ್ಪಡುತ್ತಿರಲಿಲ್ಲ. ಈ ಹಿಂದೆಯೇ ಯೇಸು ಯೆಹೂದಿ ನಾಯಕರಿಗೆ ಉತ್ತರಿಸಿದ್ದನು; ಮತ್ತು ತಿರುಗಿ ಮೌನವಾಗಿರುವದು ಆತನಿಗೆ ಯಥೋಚಿತವಾಗಿತ್ತು. ಅದೇ ಇದಾಗಿತ್ತು. ಆತನು ಮಾತನಾಡುವುದಕ್ಕೆ ನಿರಾಕರಿಸಿದ್ದರೆ, ಮಹಾಯಾಜಕನಿಗೆ ಯಾವುದೇ ಪ್ರಕರಣವು ಇರುತ್ತಿರಲಿಲ್ಲ. ದೊಡ್ಡ ವಿಪತ್ತಿನ ಕ್ಷಣದಲ್ಲಿಯೇ ಕರ್ತನು ಮಾತನಾಡಿದನು. ಯೇಸು "ನಾನೇ'' ಎಂದು ಉತ್ತರಿಸಿದನು (ಮಾರ್ಕ 14:62).[53]

"ಇದಲ್ಲದೆ ಇನ್ನು ಮೇಲೆ ಮನುಷ್ಯಕುಮಾರನು ಸರ್ವಶಕ್ತನ ಬಲಗಡೆಯಲ್ಲಿ ಆಸೀನನಾಗಿರುವುದನ್ನು ಆಕಾಶದ ಮೇಘಗಳ ಮೇಲೆ ಕುಳಿತು ಬರುವುದನ್ನೂ ಕಾಣುವಿರಿ'' ಎಂದು ಆತನು ಸೇರಿಸಿದನು (ಮತ್ತಾಯ 26:64; ನೋಡಿರಿ ದಾನಿಯೇಲ 7:13; ಕೀರ್ತನೆ 110:1). ಆ ಸಮಯದಲ್ಲಿ ಯೇಸು ನಿಂದನೆಗೆ ಒಳಗಾದನು, ಆದರೆ ಕೆಲ ಸಮಯದಲ್ಲಿಯೇ ಆತನು ತಂದೆಯ ಬಲಗಡೆಯಲ್ಲಿ ಆಸೀನನಾಗುವವನಿದ್ದನು. ಆಗ, ಆತನು ಅಧಿಕಾರದ ಬಲದಲ್ಲಿ ಇರುವಾಗ ಕಾಯಫನು ಇರುವುದಿಲ್ಲ!

ಮಹಾಯಾಜಕನು ಯೇಸುವಿನ ಪ್ರತಿಕ್ರಿಯೆಯಿಂದ ಸಂತೋಷಿಸಿರಬಹುದು, ಆದರೆ ಆತನು ಬಲು ಅಘಾತಕ್ಕೆ ಒಳಗಾದಂತೆ ನಟಿಸಿದನು. ತೀರಾ ದುಃಖಕ್ಕೆ ಒಳಗಾಗದಂತಿರುವ ಸೂಚನೆಯಂತೆ ಆತನು ತನ್ನ ಮೇಲಂಗಿಯನ್ನು ಹರಿದುಕೊಂಡನು ಮತ್ತು "ಇದು ದೇವದೂಷಣೆಯ ಮಾತು! ನಮಗೆ ಸಾಕ್ಷಿಗಳು ಇನ್ನು ಯಾತಕ್ಕೆ ಬೇಕು?'' ಎಂದು

ಹೇಳಿದನು (ಮತ್ತಾಯ 26:65) ಮೋಶೆಯ ಧರ್ಮಶಾಸ್ತ್ರದ ಪ್ರಕಾರ, ದೇವರ ಹೆಸರನ್ನು ದೂಷಣೆ ಮಾಡಿದವನನ್ನು ಮರಣಕ್ಕೆ ಒಪ್ಪಿಸಬೇಕಿತ್ತು (ಯಾಜಕಕಾಂಡ 24:16). ಯೆಹೂದಿ ಧರ್ಮಶಾಸ್ತ್ರದ ಪ್ರಕಾರ, ಯೇಸು ದೇವದೂಷಣೆಯ ದೇಶದಲ್ಲಿ ಇರಲಿಲ್ಲ.[54] ಆದರೆ ನ್ಯಾಯಯುತವಾದ ವ್ಯಾಖ್ಯೆಯ ಬಗ್ಗೆ ಕಾಯಫನು ಇಚ್ಛೆಯುಳ್ಳವನಿರಲಿಲ್ಲ. ಯೇಸು ತನ್ನನ್ನು ತಾನು "ಕ್ರಿಸ್ತನು ದೇವಕುಮಾರ"ನೆಂದು ಗುರುತಿಸಿಕೊಂಡಿದ್ದು (ತನ್ನನ್ನು ದೇವರಿಗೆ ಸರಗಟ್ಟಿಕೊಂಡನೆಂಬುದು ಆಗಿತ್ತು; ನೋಡಿರಿ ಯೋಹಾನ 5:18) ಮತ್ತು ತನಗೆ "ಮನುಷ್ಯ ಕುಮಾರನು" ಎಂಬ ಮೆಸ್ಸೀಯನ ಪದವನ್ನು ಇರಿಸಿಕೊಂಡದ್ದಷ್ಟೇ ಆತನಿಗೆ ಸಾಕಾಯಿತು. ಮಹಾಯಾಜಕನು "ಈತನು ದೇವದೂಷಣೆಯಲ್ಲಿದ್ದಾನೆ!" ಎಂದು ಕೂಗಿದನು.

ಕಾಯಫನು ಮಹಾಸಭೆಗೆ "ಇವನು ಈಗಾಗಲೇ ಆಡಿದ ದೇವದೂಷಣೆಯ ಮಾತುಗಳನ್ನು ಕೇಳಿದಿರಲ್ಲಾ. ನಿಮಗೆ ಹೇಗೆ ತೋರುತ್ತದೆ?" ಎಂದು ಕೇಳಿದನು (ಮತ್ತಾಯ 26:65, 66). "ಇವನು ಮರಣ ದಂಡನೆಯನ್ನು ಹೊಂದತಕ್ಕವನು" ಎಂದು ಅವರು ಉತ್ತರಿಸಿದರು (ಮತ್ತಾಯ 26:66). ಇದು ಸಹ್ಹದ್ರಿನಿನ ಸಹಜವಾದ ಅಭಿಪ್ರಾಯದ ಪ್ರಕಟನೆಯು ಆಗಿರಲಿಲ್ಲ; ಅದು ಸೂರ್ಯಸ್ತಕ್ಕೆ ನಂತರದ ಸ್ವಲ್ಪ ಹೊತ್ತಿಗೆ ಬಂತು (ಲೂಕ 22:66-23:1). ಹಾಗಿದ್ದಾಗ್ಯೂ, ಅವರು ಆತನಿಗೆ ಮರಣದಂಡನೆಯನ್ನು ಕೊಡುವ ಮೂಲಕ ತಮ್ಮ ಅದರಲ್ಲಿ ತೃಪ್ತಿಯನ್ನು ಕಂಡುಕೊಂಡರು.

ತಮ್ಮ ಉದ್ದೇಶವನ್ನು ಸಂಪೂರ್ಣಗೊಳಿಸುವುದರಿಂದ (ಅವರು ಯೋಚಿಸಿದಂತೆ), ಮಹಾಸಭೆಯ ಸದಸ್ಯರು ಹೇಳಿಕೊಳ್ಳಲಾರದಂಥ ದ್ವೇಷವನ್ನು ಪ್ರಕಟಿಸಿದರು; ಯೇಸುವಿನ ಮುಖಕ್ಕೆ ಮುಸುಕು ಹಾಕಲ್ಪಟ್ಟಿತು (ಮಾರ್ಕ 14:65; ನೋಡಿ ಲೂಕ 22:64). ನಂತರ ಕೆಲವರು "ಆತನ ಮುಖದ ಮೇಲೆ ಉಗುಳಿ ಆತನನ್ನು ಗುದ್ದಿದರು." ಕೆಲವರು ಆತನ ಕೆನ್ನೆಗೆ ಏಟುಹಾಕಿ "ಕ್ರಿಸ್ತನೇ, ನಿನ್ನನ್ನು ಹೊಡೆದವರು ಯಾರು? ನಮಗೆ ಪ್ರವಾದನೆ ಹೇಳು" ಅಂದರು (ಮತ್ತಾಯ 26:67, 68).[55] "ಓಲೆಕಾರರು" ಆಮೇಲೆ ಯೇಸುವನ್ನು ಹಿಡಿದವರು "ಆತನ ಕೆನ್ನೆಗೆ ಏಟು ಹಾಕುತ್ತಾ, ಆತನನ್ನು ಹಾಸ್ಯಮಾಡುತ್ತಾ ತಮ್ಮ ವಶಕ್ಕೆ ತೆಗೆದುಕೊಂಡರು" (ಮಾರ್ಕ 14:65; ಲೂಕ 22:63, 64).[56] "ಆತನಿಗೆ ಇನ್ನೂ ಅನೇಕ ದೂಷಣೆಯ ಮಾತುಗಳನ್ನಾಡಿದರು" (ಲೂಕ 22:65). ಈ ರೀತಿಯಲ್ಲಿ ಕ್ರಿಸ್ತನ ವೈರಿಗಳು ನಸುಕಿನವರೆಗೂ ಸಮಯವನ್ನು ಕಳೆದರು.

## ಮುಕ್ತಾಯ

ಆ ಉದ್ದನೆಯ ರಾತ್ರಿಯು ಕೊನೆಗೂ ಅಂತ್ಯವಾಗುವುದಕ್ಕೆ ಬಂತು, ಆದರೆ ಉದ್ದನೆಯ ದಿನವು, ಯೇಸುವಿನ ಮರಣದ ದಿನವಾಗಿ ಪರಿಣಮಿಸಿದ ಆ ದಿನವು ಇನ್ನೂ ಮುಂದೆ ಇತ್ತು. ಅನೇಕ ಕ್ರೌರ್ಯಗಳು ಮತ್ತು ಅನ್ಯಾಯಗಳು ಇನ್ನೂ ಮುಂದುವರೆಯುವವು ಆಗಿದ್ದವು. ನಮ್ಮ ಮುಂದಿನ ಪಾಠವು ಪೇತ್ರನ ನಿರಾಕರಣೆಯಿಂದ ಪ್ರಾರಂಭವಾಗುತ್ತದೆ ಮತ್ತು ನಂತರ ಕಥೆಯು ಮುಂದಿನ "ಕರ್ತನ ಪರೀಕ್ಷೆಗಳಲ್ಲಿ" ಮುಂದುವರೆಯುತ್ತದೆ.

## ಮಾಹಿತಿ

ಈ ಪಾಠದ ವಿಭಿನ್ನವಾದ ಶೀರ್ಷಿಕೆಯು "ನಿದ್ರಾರಹಿತ ರಾತ್ರಿ" ಎಂದಾಗಬಹುದು. ಮುಂಬರುವ ಕೆಲ ವಿಚಾರಗಳು ವೇದಭಾಗವನ್ನು ತಲುಪವವು ಆಗಿವೆ.

**ಯೇಸುವಿಗೆ ಗುರುದ್ರೋಹ ಮಾಡಿದವರು**

ಯೂದನ ಮೇಲೆ ಬೋಧಿಸಬಹುದಾದ ಪ್ರಸಂಗದ ಇನ್ನೊಂದು ಸಂದರ್ಭವು ಇದಾಗಿದೆ.

**ತೋಟದಲ್ಲಿ ಯೇಸುವಿನ ಕ್ಷಣಗಳು**

ಗೆತ್ಸೆಮನೆಯ ಮೇಲಿನ ಪ್ರಸಂಗವು ವಿರಣಾತ್ಮಕ ಪ್ರಸಂಗದ ಟಿಪ್ಪಣೆಗಳನ್ನು ಒಳಗೊಂಡಿದ್ದು ಈ ಪಾಠದಲ್ಲಿ ಮುಂದಿರುವುದಾಗಿದೆ. ತನ್ನ ಮರಣವನ್ನು ಸಮೀಪಿಸುತ್ತಿದ್ದಂತೆ ಯೇಸು ತನ್ನ ಶಿಷ್ಯರಿಗೆ ಪ್ರಾರ್ಥನೆಯಲ್ಲಿ ಜೊತೆಯಾಗಿರಲು ಕೇಳಿಕೊಂಡ ಅಂಶವು ಏಕಾಂತದ ಮೇಲಿನ ಪ್ರಸಂಗಕ್ಕೋಸ್ಕರ ಆರಂಭದ ಸ್ಥಳವಾಗಿರುವಂತೆ ನಡೆಸುವುದಾಗಿದೆ. (ಸಾಧ್ಯತೆಯಿರುವ ಶೀರ್ಷಿಕೆ ಎಂದರೆ "ಏಕಾಂತವನ್ನು ದಮನಮಾಡುವದು.")

**ಯೇಸುವಿನ ಅಂತಿಮ ಸ್ವಸ್ಥತೆಯ ಅದ್ಭುತಕಾರ್ಯ**

"ಮಲಕಸ್‌ನ ಕಿವಿಯ ಘಟನೆ" ಇದನ್ನು ಸಂಪೂರ್ಣವಾಗಿ ತೆಗೆದುಕೊಳ್ಳುವ ಅವಶ್ಯಕತೆಯಿದ್ದಾಗ ಈ ಘಟನೆಯನ್ನು ಆಧರಿಸಿ ಮಂಡನೆಗಾಗಿ ಬಳಸಬಹುದು. (ಮಲಾಕಸ್‌ನ ಕಿವಿಯ ಘಟನೆಯ ಬಗೆಗೆ ಕೆಲ ಸುವಾರ್ತಾ ವಿವರಗಳಲ್ಲಿ ಇನ್ನೂ ಅನೇಕ ವಿವರಗಳು ಸಿಕ್ಕುತ್ತವೆ ಆದರೆ ಇನ್ನಿತರವುಗಳಲ್ಲಿ ಸಿಕ್ಕವು.) ಈ ವಿಚಾರವು ರಕ್ಷಣೆಯ ಬಗೆಗಿನ ಶರತ್ತನ್ನು ಸತ್ಯವೇದವು ಹೇಳುವ *ಎಲ್ಲರನ್ನು* ತೆಗೆದುಕೊಳ್ಳುವದನ್ನು ವಿಚಾರದ ಪ್ರಸಂಗದತ್ತ ಇದು ನಡೆಸುವುದಾಗಿದೆ.

**ಯೇಸುವಿನ ಪರೀಕ್ಷೆ**

ನಮ್ಮ ವೇದಭಾಗದಲ್ಲಿನ ಇನ್ನೊಂದು ವಿಷಯವು ತಂತಾನೇ ಕೊಡುಗೆಯಾದ ಪ್ರಸಂಗದ ಅಂಶವೇ ಯೇಸುವಿನ ಪರೀಕ್ಷೆಯಾಗಿದೆ. (ಈ ಪುಸ್ತಕದಲ್ಲಿ ಸಿಕ್ಕುವ "ನಿನ್ನ ತೀರ್ಪೇನು?" ಎಂಬ ಪ್ರಸಂಗವನ್ನು ನೋಡಿರಿ.)

---

ಟಿಪ್ಪಣೆಗಳು

[1]ಅಧ್ಯಾಯ 15ರಿಂದ 17ರಲ್ಲಿನ ಮೇಲುಪ್ಪರಿಗೆಯಿಂದ ಗೆತ್ಸೆಮನೆಯವರೆಗಿನ ಪ್ರಯಾಣದಲ್ಲಿ ಕಂಡ ದೃಶ್ಯಗಳಿಂದ ಪ್ರಭಾವಿತವಾಗಿರುವ ಉಪಮೆಗಳ ಭಾಗವಾಗಿವೆ ಎಂದು ಕೆಲವರು ನಂಬುತ್ತಾರೆ. (ಈ ಪುಸ್ತಕದಲ್ಲಿ ಸಿಕ್ಕುವ "ಕರ್ತನಿಗಾಗಿ ಫಲ ಕೊಡುವದು" ಎಂಬ ಪಾಠವನ್ನು ನೋಡಿರಿ.) ಇದು ಆ ವಿಷಯವೇ ಆಗಿದ್ದರೂ ಕೂಡಾ, ಯೋಹಾನ 15-17ರಲ್ಲಿನ ಯಾವುದೇ ಪದಗಳು ಅವರು ಇನ್ನೂ ಪಟ್ಟಣದಲ್ಲಿರುವಾಗ, ಅವರು ಕಿದ್ರೋನನ್ನು ದಾಟಿಹೋಗುವ ಮುನ್ನ ಮಾತನಾಡಿದವುಗಳು ಆಗಿವೆ (ನೋಡಿರಿ ಯೋಹಾನ 18:1). [2]ಮಾರ್ಕ 14:26-32ರ ಪ್ರಕಾರ, ಅವರು ಮೇಲುಪ್ಪರಿಗೆಯಿಂದ ಹೊರಬರುವಾಗ ಮತ್ತು ಗೆತ್ಸೆಮನೆಯನ್ನು ತಲುಪುವ ಮುನ್ನ ಇವುಗಳ ಮಧ್ಯದ ಸಮಯದಲ್ಲಿ ಯೇಸು ಕೆಲ ಮಾತುಗಳನ್ನು ಮಾತನಾಡಿದನು, ಆದರೆ ಆ ಚಿಕ್ಕ ಪ್ರಯಾಣದಲ್ಲಿ ಆತನು ಮಾತನಾಡಿದ ಯಾವುದೇ ಮಾತುಗಳನ್ನು ನಾವು ತಿಳಿದಿಲ್ಲ. [3]"Homiletics" ಇದು ಪ್ರಸಂಗದ ಸಿದ್ಧತೆ ಮತ್ತು ಪ್ರಸಂಗಿಸುವುದನ್ನು ಒಳಗೊಂಡಿದೆ. [4]"Hallel" ಇದು "ಸ್ತೋತ್ರ"ವನ್ನು ಸೂಚಿಸುವ ಗ್ರೀಕ್ ಭಾಷಾಂತರವಾಗಿದೆ. [5]Jack P. Lewis, *The Gospel According to Matthew, Part 2,* The Living Word Commentary Series, ed. Everett Ferguson (Abilene, Tex.: ACU Press, 1976), 148. [6]J. W. McGarvey and Philip Y. Pendleton, *The Fourfold Gospel or A Harmony of the Four Gospels* (Cincinnati: Standard Publishing Co., 1914), 685. [7]ಕಿದ್ರೋನ್ ಹಳ್ಳವು ಯೆರೂಸಲೇಮಿನ ಪೂರ್ವದ ಗೋಡೆಗೆ ಸಮಾನವಾಗಿ ಹರಿಯುತ್ತದೆ. ಮುಂದೆ ಈ ಪುಸ್ತಕದಲ್ಲಿ ಸಿಕ್ಕುವ (ಯೇಸುವಿನ ಕೊನೆಯ ತಾಸುಗಳ ಮಾರ್ಗವನ್ನು ಸೂಚಿಸುವದರೊಂದಿಗೆ) "ಯೆರೂಸಲೇಮ ಪಟ್ಟಣ" ಎಂಬ ನಕಾಶೆಯನ್ನು ನೋಡಿರಿ. [8]ಗೆತ್ಸೆಮನೆಯ ಕಠಿಣ ಪರೀಕ್ಷೆಯ ಹೆಚ್ಚಿನ ವಿವರಗಳಿಗಾಗಿ ಈ ಪುಸ್ತಕದಲ್ಲಿ ಸಿಕ್ಕುವ "ತೋಟದಲ್ಲಿ" ಎಂಬ ಪಾಠವನ್ನು ನೋಡಿರಿ. [9]ಈ ವಾಕ್ಯವು H. I. Hester, *The Heart of the New Testament* (Liberty, Mo.: Quality Press, 1963), 199 ರಿಂದ ತೆಗೆದುಕೊಳ್ಳಲಾಗಿದೆ. ಇಂದಿನ ದಿನಗಳ ಗೈಡುಗಳು ಯೇಸು ಪ್ರಾರ್ಥಿಸಿದಂತಹದ್ದು ಎಣ್ಣೆಮರಗಳ ಕೆಳಗೆ ಎಂದು ಪ್ರತಿಪಾದಿಸುವವರಾಗಿದ್ದಾರೆ, ಆದರೆ ಪ್ರಾಚೀನ ಇತಿಹಾಸಕಾರರ ಪ್ರಕಾರ, ರೋಮ

ಮುತ್ತಿಗೆ ಹಾಕಿದಾಗ ಎಲ್ಲಾ ಮರಗಳು ಬಹಳವಾಗಿ ಹಳೆಯದು ಆಗಿವೆ. [10]"ಆತನು ... ಬಿಟ್ಟು ಕಲ್ಲೆಸುಗೆಯಷ್ಟು ದೂರಹೋಗಿ ..." (ಲೂಕ 22:41ಎ). ಕಲ್ಲನ್ನು ಎಷ್ಟು ದೂರ ಎಸೆಯಬಹುದು? ಅದು ಕಲ್ಲನ್ನು ಯಾರು ಎಸೆಯುತ್ತಾರೋ? ಅವರ ಮೇಲೆ ಅವಲಂಭಿತವಾ ಗಿರುತ್ತದೆ, J. W. McGarvey ರವರು ಆ ಅಂತರವನ್ನು 150 ರಿಂದ 200 ಅಡಿ ಎಂದು ಅಳತೆ ಮಾಡಿದ್ದಾರೆ (McGarvey and Pendleton, 686).

[11]ಪ್ರಾಚೀನವಾದ ಮತ್ತು ಒಂದು ಹೇಳಿಕೆಯಂತೆ ಯೇಸು ದೊಡ್ಡ ಬಂಡೆಯ ಮೇಲೆ ಮೊಣಕಾಲೂರಿದನು. ತೋಟದಲ್ಲಿ ಯೇಸುವನ್ನು ಚಿತ್ರಿಸಿರುವ ವರ್ಣಚಿತ್ರವು ಈ ಬಂಡೆಯನ್ನು ಕಲ್ಪಿಸಿದೆ. ವೇದಭಾಗದ ಪ್ರಕಾರ, ಯೇಸು ನೆಲದ ಮೇಲೆ ಮೊಣಕಾಲುಗಳ ಮೇಲೆ ಬಿದ್ದನು. [12]ಮುಂದಿನ ಪಾಠದಲ್ಲಿ ಬರುವ "ಈ ಬಟ್ಟಲು" ಎಂಬ ಪಾಠದ ಮೇಲೆ ವ್ಯಾಖ್ಯೆಯನ್ನು ನೋಡಿರಿ. [13]ಯೇಸುವಿನ ಪ್ರಶ್ನೆಯು ಸೂಚಿತವಾಗಿದೆ. [14]ದುಃಖವು ಕೆಲ ಜನರ ಮೇಲೆ ಪ್ರಭಾವಿತವಾಗಿದೆ. ದುಃಖಕ್ಕೆ ಒಳಗಾಗುವ ಸಾಮಾನ್ಯ ಚಿನ್ಹೆಯು ಎಲ್ಲಾ ಸಮಯದಲ್ಲಿಯೂ ಮಲಗುವ ಇಚ್ಛೆಯುಳ್ಳದೇ ಆಗಿದೆ. [15]ಯೇಸುವಿನ ಜೀವಿತದ ಸಂಗತಿಗಳಲ್ಲಿ ದೇವದೂತರೂ ಸದಾ ಜೊತೆಯಿದ್ದಾರೆ. ಉದಾಹರಣೆ ಅವರು ಆತನ ಜನನದಲ್ಲಿ ಹಾಡನ್ನು ಹಾಡಿದರು (ಲೂಕ 2:13, 14) ಮತ್ತು ಅರಣ್ಯದಲ್ಲಿ ಆತನ ಶೋಧನೆಯ ನಂತರ ಆತನನ್ನು ಉಪಚರಿಸಿದರು (ಮತ್ತಾಯ 4:11). ನಂತರ ಅವರು ಪುನರುತ್ಥಾನವನ್ನು ಘೋಷಿಸಿದರು (ಮತ್ತಾಯ 28:2, 5, 6). [16]ಈ ವಾಕ್ಯದ ಮೊದಲ ಭಾಗವು ಸಹ "ಆದ್ದರಿಂದ ಮಲಗಿರಿ" ಎಂದೇ ಭಾಷಾಂತರವಾಗಿದೆ (KJV ನೋಡಿರಿ). ಅದು ನನಗೆ ತಿಳಿದಿರುವಂತೆ: "ನಿನಗೆ ಆರಾಮದಾಯಕವಾಗಿರುವಷ್ಟು ಸಮಯ ಅಥವಾ ಎಲ್ಲವೂ ಮುಗಿದುಹೋಗುವ ತನಕ ನನಗೆ ಸಹಾಯಿಸುವ ತನಕ ನೀನು ಮಲಗಬಹುದು ಮತ್ತು ವಿಶ್ರಾಂತಿಯನ್ನು ತೆಗೆದುಕೊಳ್ಳಬಹುದು." ಎಂಬುದು ಯೇಸು ಹೇಳಿದಂಥ ಈ ಸಾಲಿನ ಅರ್ಥದೊಡನೆ ಇರುವುದಾಗಿರಬಹುದು (McGarvey and Pendleton, 688). [17]"ತಾಸು" ಆತನ ಮರಣದ ಸಮಯವನ್ನು ಸೂಚಿಸುವುದಾಗಿದೆ. ಈ "ತಾಸಿ"ನತ್ತ ಯೇಸು ಪ್ರಗತಿಪೂರ್ವಕವಾಗಿ ಸಾಗುತ್ತಲೇ ಇದ್ದಾನೆ (ನೋಡಿರಿ ಯೋಹಾನ 2:4; 7:30; 8:20; 12:23, 27 13:1; 17:1). [18]ಕ್ರಿಸ್ತನನ್ನು ಸೆರೆಹಿಡಿಯುವ ವ್ಯವಸ್ಥೆಗಾಗಿ ವಿವಿಧ ಮಾರ್ಗಗಳು ಅಲ್ಲಿದ್ದವು. ಈ ಪಾಠದಲ್ಲಿನ ಈ ಕ್ರಮವು ಒಂದು ಮಾರ್ಗವಾಗಿದೆ. [19]ಈ ಪಾಠದಲ್ಲಿ ನಂತರದಲ್ಲಿ ಸಿಕ್ಕುವ ಮಾರ್ಕ 14:51, 52ರ ಮೇಲಿನ ವ್ಯಾಖ್ಯಾನವನ್ನು ನೋಡಿರಿ. [20]ಮಹಾಸಭೆಯ ಪ್ರತಿನಿಧಿಗಳೂ ಸಹ ಅಲ್ಲಿ ಪ್ರತ್ಯಕ್ಷವಾಗಿ ಉಪಸ್ಥಿತರಿದ್ದರು (ಲೂಕ 22:52). ಆ ಗುಂಪು "ಫರಿಸಾರದು" (ಯೋಹಾನ 18:3) ಆಗಿತ್ತು ಎಂದು ಯೋಹಾನನು ಸೂಚಿಸುತ್ತಾನೆ; ಮಹಾಸಭೆಯಲ್ಲಿ ಫರಿಸಾಯರದು ಒಂದು ಪಾಲು ಇತ್ತು (ಅಪೊಸ್ತಲರ ಕೃತ್ಯಗಳು 23:1, 6).

[21]ಹಳೆಯ ಒಡಂಬಡಿಕೆಯ ಪ್ರಕಾರ, ಯಾಜಕರು ಈ ತರದ ಕಾರ್ಯವನ್ನು ಸಂಪೂರ್ಣಗೊಳಿಸುವವರಾಗಿರುತ್ತಾರೆ; ಬಹುಶಃ ಇವರು ಯಾಜಕರಾಗಿರಬಹುದು ಅಥವಾ ಆಗಿರದೇ ಇರಬಹುದು. [22]ರೋಮನ ಸೈನಿಕರು ಮೂಲತಹವಾಗಿ ಯೆರೂಸಲೇಮಿನಲ್ಲಿ ಸಂಭವಿಸಬಹುದಾದ ಸಂಭವನೀಯ ಅಹಿತಕರ ಘಟನೆಗಳನ್ನು ನಿವಾರಿಸಲು ಇರುವವರಾಗಿದ್ದರು. ಹಿರಿಯಯಾಜಕನು ಬಹುಶಃ ರೋಮನ ದಳಪತಿ ಯೇಸುವಿನ ಬಗೆಗೆ ಹೇಳಿ ತನ್ನ ಜನರನ್ನು ಈ ಕಾರ್ಯದಲ್ಲಿ ಒಳಪಡಿಸಲು ಒಪ್ಪಿಸಿರಬಹುದು. [23]ಯೋಹಾನ 18:12ರಲ್ಲಿ ಇರುವ "ರೋಮನ್" ಎಂಬ ಪದವು ಇಟಾಲಿಕನಲ್ಲಿ ಇದ್ದು ಇದು ಭಾಷಾಂತರಕಾರರಿಂದ ಸೇರಿಸಲ್ಪಟ್ಟದ್ದು ಎಂದು ಸೂಚಿಸುವುದಾಗಿದೆ. ಹೇಗೂ, ಯೋಹಾನನು ಬಳಸಿದ ಗ್ರೀಕ್‌ಪದವಾದ "ಸಿಪಾಯಿಗಳು" ಎಂಬ ಪದವು ರೋಮನ್ ಸೇನೆಗಾಗಿ ಬಳಸಲ್ಪಟ್ಟಿದೆ. ಹತ್ತು ಸಿಪಾಯಿದಳವು "ದಂಡು" ಎಂಬ ಪದಕ್ಕೆ, ಅಥವಾ ಆರು ಸಾವಿರ ಸೈನಿಕರಿಗೆ ಸಮಾನವಾಗಿದೆ. ಹಬ್ಬದ ಆರಂಭದ ದಿನದಲ್ಲಿ, ರೋಮಾ ಸೈನಿಕರು ರೋಮೀ ಸಮಸ್ತಾಧಿಪತಿಯಿಂದ ಹೆಚ್ಚಳ ಮಾಡಲ್ಪಟ್ಟರು ಮತ್ತು ಯಾವುದೇ ದಂಗೆಯನ್ನು ಅಡಗಿಸಲು ಸಿದ್ಧರಿದ್ದರು. ಈ ಸೇನಾಪಾಳ್ಯವು ದೇವಾಲಯದ ಸಂಕೀರ್ಣದ ವಾಯುವ್ಯ ಮೂಲೆಯಲ್ಲಿ ಇದ್ದಂಥ ಕಾಸ್ಟಲ್ ಅನೋಟನಿಯಾದಲ್ಲಿ ಇತ್ತು. *ಕ್ರಿಸ್ತನ ಜೀವನ ಚರಿತ್ರೆ, 1ನ್ನು* ಸಿಕ್ಕುವ ದೇವಾಲಯದ ನಕ್ಷೆಯನ್ನು ನೋಡಿರಿ. [24]ಪಸ್ಕದ ಸಮಯದಲ್ಲಿ ಪೂರ್ಣಚಂದ್ರನಿದ್ದಾಗಲೂ ಕೂಡಾ ಅವರು ದೀವಟಗೆಯನ್ನು ತಂದಿದ್ದರು (ಯೋಹಾನ 18:3). ಯೇಸು ಅಲ್ಲಿಂದ ಓಡಿಹೋಗಲು ಪ್ರಯತ್ನಿಸಬಹುದೆಂದೂ ಮತ್ತು ತೋಟದ ಮಧ್ಯದಲ್ಲಿ ಆತನನ್ನು ತಾವು ಹುಡುಕಬೇಕಾಗಬಹುದೆಂದು ಅವರು ಯೋಚಿಸಿರಬಹುದು. [25]ಚಿನಿವಾರಾರನ್ನು ದೇವಾಲಯದಿಂದ ಹೊರಹಾಕಲು ದಿವ್ಯ ಉಪಸ್ಥಿತಿಯ ಯೇಸುವಿಗೆ ಸಾಕಷ್ಟಾಯಿತು (ಮಾರ್ಕ 11:15; ಯೋಹಾನ 2:15). [26]G. Hall Todd, *The Gamblers at Golgotha* (Grand Rapids, Mich.: Baker Book House, 1958), 39. [27]"ಗೆಳಯನೇ" ಎಂಬ ಪದವು ವ್ಯಂಗೋಕ್ತಿಯಾಗಿದೆ. ಯೇಸು ಯೂದನಿಗಾಗಿ ತನ್ನ ಸ್ನೇಹವನ್ನು ಉಳಿಸಿಕೊಂಡನು ಆದರೆ ಯೂದನು ಆತನ ಸ್ನೇಹತ್ವವನ್ನು ನಿರಾಕರಿಸಿದನು.

[28]ಯೇಸುವನ್ನು ಸೆರೆಹಿಡಿಯಲು ರೋಮನ್ ಸೈನಿಕರು ಓಲೆಕಾರರಿಗೆ ಸಹಾಯಮಾಡಿರಬಹುದು (ಯೋಹಾನ 18:12). ಆದರೆ ಸೆರೆಹಿಡಿಯಲು ಬಂದವರು ಅವರಿಗೆ ತಿಳಿಯದವರಾಗಿದ್ದು ಎಷ್ಟರವರೆಗೆ ಅವರೊಡನೆ ಇದ್ದರು ಎಂದು ತಿಳಿಯದು. ಕೆಲವಿಚಾರದಲ್ಲಿ ಅವರು ಯೆಹೂದಿಗಳ ಸೆರೆಯಿಂದ ಯೇಸುವನ್ನು ಬಿಡಿಸಬಹುದಿತ್ತು (ಹೋಶಿಯ 22:30). [29]ಹಿಂದೆ, ಅಪೊಸ್ತಲರು ಎರಡು ಕತ್ತಿಗಳನ್ನು ಹೊಂದುವ ಅವಕಾಶ ಇದೆ ಎಂದು ಹೇಳಲಾಗಿತ್ತು (ಲೂಕ 22:38); ಅವರಲ್ಲಿ ಒಬ್ಬರಾದರೂ ತೋಟ ದೊಳಕ್ಕೆ ತಂದಿರಬಹುದು. [30]ಯೋಹಾನನು ಹಿರಿಯಾಜಕನ ಮನೆಯವರಿಗೆ ಪರಿಚಿತನಾಗಿದ್ದನು (ಯೋಹಾನ 18:15, 16), ಆ ಆಳಿನ ಹೆಸರು ಮಲಾಕಸ ಎಂದು ಗಮನಿಸಲ್ಪಟ್ಟಿದೆ. ಮಲಾಕಸನು ಯಾರು ಎಂದು ತನ್ನ ಓದುಗರು ಅರಿಯಲಿ ಎಂದು, ಮಲಾಕಸನು ಕ್ರಮೇಣವಾಗಿ ಕ್ರೈಸ್ತನಾಗಿ ಪರಿವರ್ತಿತನಾಗಲು ಯಾವದು ಸೂಚಿಸಬಹುದು ಇದನ್ನು ತಿಳಿಸಲು ಯೋಹಾನನು ಬಯಸುವವನಾಗಿದ್ದನು ಎಂದು ಕೆಲವರು ಊಹಿಸುವವರಾಗಿದ್ದಾರೆ. ಕತ್ತಿಹಿಡಿದವನ ಹೆಸರು ಕೊಟ್ಟ ಲೇಖಕರಲ್ಲಿ ಸಹ ಯೋಹಾನನೇ ಒಬ್ಬವನಾಗಿದ್ದಾನೆ, ಯಾಕೆಂದರೆ ಈ ವಿವರಗಳನ್ನು ಬರೆಯುವ ಆ ಸಮಯದಲ್ಲಿ ಪೇತ್ರನು ಮರಣಿಸಿದ್ದನು ಮತ್ತು ಮುಂದೆ ಹೆಚ್ಚು ಕಾಲ ರೋಮನ್ನರ ಕೈಯಲ್ಲಿ ಹೆಚ್ಚು ಕಷ್ಟವನ್ನು ಪಡಲಿಲ್ಲ.

[31]Warren W. Wiersbe, *The Bible Exposition Commentary,* vol. 1 (Wheaton, Ill.: Victor Books, 1989), 162. [32]ನಿಜವಾಗಿಯೂ ಒಬ್ಬನೇ ದೇವದೂತನೂ ಸಾಕಾಗಿದ್ದನು. [33]ತನ್ನ ಮರಣವು ಶಾಸ್ತ್ರದ ಪರಿಪೂರ್ಣತೆಯಾಗಿದೆ ಎಂದು ಯೇಸು ಮರು ಮುಂತಿಳಿಸಿದನು (ಮತ್ತಾಯ 26:54, 56). [34]ಈ ಘಟನೆಯು ಯೇಸುವಿನ ಕೈಗಳು ಕಟ್ಟುವುದಕ್ಕೆ ಮುನ್ನ ಸಂಭವಿಸಿರಬೇಕು. ಈ ಪ್ರಸಂಗದಲ್ಲಿ ಯೇಸು ತನ್ನ ಕಟ್ಟಲಾರದ ಕೈಯಿಂದ ಆತನೆಡೆಗೆ ಹೋದನು. [35]ಕರ್ತನು ಗಾಯಗೊಂಡ ಕಿವಿಯನ್ನು ಪುನಃ ಇಟ್ಟನೋ ಅಥವಾ ಏನು ಎಂಬುದನ್ನು ಈ ಸ್ವಸ್ಥತೆಯ ಬಗ್ಗೆ ವಿವರಗಳನ್ನು ನಾವು ಕೊಡುತ್ತಿಲ್ಲ - ಆದರೆ ನಿಯಮದಂತೆ ಸ್ವಸ್ಥವಾಗಬೇಕಾದವನು ಸ್ವಸ್ಥನಾದ ನಂತರ ಯಾವುದೇ ವಿಕಾರವು ಇರಲಿಲ್ಲವೇನೋ ಎಂಬಂತೆ ಸರಿಯಾದ ರೀತಿಯಲ್ಲಿ ಇದ್ದನು. [36]ವಾರದ ಮೊದಲನೆಯ ದಿನದಲ್ಲಿ ಯೇಸುವಿನ ಪುನರುತ್ಥಾನದಿಂದ ಮಟ್ಟಹಾಕಲ್ಪಟ್ಟ ಅಲ್ಪಕಾಲದ ವಿಜಯವು ಇದು ಆಗಿದೆ. [37]ಯೋಹಾನನು ಯಾವಾಗಲು ತನ್ನನ್ನು ಮೂರನೆಯ ವ್ಯಕ್ತಿ ಎಂದು ಸೂಚಿಸುವುದನ್ನು ಆತನ ವಿವರಣೆಯಲ್ಲಿ ನಾವು ನೋಡುತ್ತೇವೆ; ಮಾರ್ಕನು ಅದನ್ನೇ ಮಾಡಿದ್ದಾನೆ. ಮಾರ್ಕನ ತಾಯಿಮನೆಯು ಯೆರೂಸಲೇಮಿನಲ್ಲಿ ಇತ್ತು (ಅಪೊಸ್ತಲರ ಕೃತ್ಯಗಳು 12:12, 25); ಮೊದಲೇ ಗಮನಿಸಿದಂತೆ, ಅವಳ ಮನೆಯು ಕೊನೆಯ ಭೋಜನದ ಸ್ಥಳವಾದಂಥ ಸಾಧ್ಯತೆಯು ಇದೆ. ಅವರು ಮೇಲುಪ್ಪರಿಗೆಯ ಮನೆಯಿಂದ ಹೊರಡುತ್ತಿದ್ದಂತೆಯೇ ಅವರು ಒಬ್ಬ ಯೌವನಸ್ಥನು ಯೇಸುವನ್ನು ಮತ್ತು ಆತನ ಶಿಷ್ಯರನ್ನು ಹಿಂಬಾಲಿಸಿದನೂ ಅಥವಾ ನಂತರದಲ್ಲಿ ಆತನು ತೋಟಕ್ಕೆ ಹೋದನೂ ಅದು ಸ್ಪಷ್ಟವಾಗಿದೆ. ಯೂದನೇ ಮೊದಲು ಗುಂಪನ್ನು ಮೇಲುಪ್ಪರಿಗೆ ಮನೆಗೆ ನಡೆಸಿದ್ದಾದರೆ, ಕ್ರಿಸ್ತನು ಎಲ್ಲಿ ಇದ್ದನೋ ಅಲ್ಲಿ ಆ ಗುಂಪನ್ನು ಮಾರ್ಕನು ಹಿಂಬಾಲಿಸುತ್ತಿದ್ದನು. ಆ ಯೌವನಸ್ಥನು ಅನೇಕ ರೀತಿಯಲ್ಲಿ ಆತನು ಯೇಸುವಿನ ಶಿಷ್ಯನು ಆಗಿರಲೇಬೇಕು ಎಂದು ಸೂಚಿತನಾಗಿದ್ದಾನೆ, ಯಾಕೆಂದರೆ ಜನರ ಗುಂಪು "ಆತನನ್ನು ಹಿಡಿಯಿತು" (ಮಾರ್ಕ 14:51). [38]ಪಸ್ಕದ ಹಬ್ಬವು ಕೊನೆಗೊಂಡ ಎರಡು ಅಥವಾ ಮೂರು ತಾಸಿನಲ್ಲಿಯೇ, ಸೂರ್ಯಾಸ್ತದ ಸ್ವಲ್ಪಹೊತ್ತಿನ ನಂತರ ಸಂಭವಿಸಿದ್ದು ಇದು (ಸುಮಾರು 6 ಘಂಟೆ). ಇದು ಯೋಹಾನ 14-17ರ ಉದ್ದನೆಯ ಪ್ರಸಂಗ ಮತ್ತು ಪ್ರಾರ್ಥನೆಯ ಮುಂದುವರೆದ ಭಾಗವಾಗಿದೆ. ನಂತರ ಯೇಸು ಮತ್ತು ಮತ್ತು ಆತನ ಶಿಷ್ಯರು ಕರ್ತನು ಸ್ಪಷ್ಟವಾಗಿ ಒಂದಕ್ಕಿಂತ ಹೆಚ್ಚು ತಾಸು ಪ್ರಾರ್ಥನೆಯಲ್ಲಿ ಕಳೆದ ಗೆತ್ಸೆಮನೆಯ ತೋಟಕ್ಕೆ ನಡೆದರು. ಯಾದನು ಮತ್ತು ಜನರ ಗುಂಪು ಬಂದಾಗ ಬಹುಶಃ ಮಧ್ಯರಾತ್ರಿ ಅಥವಾ ಬೆಳಿಗ್ಗೆ 1 ಘಂಟೆ ಆಗಿರಬೇಕು. [39]ಅನ್ನನೊಡನೆಯ ಈ ಪ್ರಸಂಗವನ್ನು ಯೋಹಾನನೊಬ್ಬನೇ ಹೇಳುತ್ತಾನೆ. ಯೆಹೂದಿ "ಪರೀಕ್ಷೆಯ" ಬಗೆಗೆ ನೋಡುವುದಾದರೆ ಯೋಹಾನನ ವಿವರಣೆಯು ದಶಕದ ನಂತರ ಬರೆಯಲ್ಪಟ್ಟಿದ್ದು ಸಿನಾಪ್ಟಿಕ್ ಸುವಾರ್ತೆಯಿಂದ ಹೆಚ್ಚಾದ ನಕಲನ್ನು ಮಾಡಿಲ್ಲ. [40]ಯೇಸುವಿನ "ಪರೀಕ್ಷೆಗಳು" ಕೆಲ ಅಂಶಗಳು ಈ ಪುಸ್ತಕದಲ್ಲಿ ಸಿಕ್ಕುವ "ನಿನ್ನ ತೀರ್ಪು ಏನು?"ಎಂಬುದರಲ್ಲಿ ಚರ್ಚಿತವಾಗಿದೆ.

[41]F. LaGard Smith, *The Narrated Bible in Chronological Order* (Eugene, Oreg.: Harvest House Publishers, 1984), 1467. [42]"ಅನ್ನನ" ಮೇಲಿನ ಸಂಕ್ಷಿಪ್ತ ಟಿಪ್ಪಣೆಗಾಗಿ *ಕ್ರಿಸ್ತನ ಜೀವನ ಚರಿತ್ರೆ, 1ನ್ನು* ಪುಸ್ತಕದಲ್ಲಿ ಸಿಕ್ಕುವ "ಕ್ರಿಸ್ತನು ಆಗಮಿಸಿದ ಲೋಕ" ಎಂಬ ಪಾಠವನ್ನು ನೋಡಿರಿ. [43]"ಅಧ್ಯಕ್ಷರು" ಎಂಬಂಥ ಗೌರವಾನ್ವಿತ ಬಿರುದುಗಳು ಆ ವ್ಯಕ್ತಿಯು ಆ ಹುದ್ದೆಯಲ್ಲಿ ಇರದಿದ್ದರೂ ಕೂಡಾ ನಂತರದಲ್ಲಿಯೂ ಮುಂದುವರೆಯುವವು ಆಗಿವೆ. [44]ಸನ್ಹೆದ್ರೀನಿನ ಪ್ರತಿನಿಧಿಗಳು ಸ್ಪಷ್ಟವಾಗಿ ಸೆರೆಹಿಡಿಯಲು ಉಪಸ್ಥಿತರಿದ್ದರು (ಲೂಕ 22:52), ಆದರೆ ಸೆರೆಹಿಡಿಯಲ್ಪಟ್ಟ ನಂತರ

ಬಹುಶಃ ಅವರು ಒಪ್ಪಂದಕ್ಕೆ ಒಳಗಾಗಿರಬಹುದು. [45]ಯೇಸುವಿನ ಹೇಳಿಕೆಯೆಂದರೆ "ಯಾವುದನ್ನು ಗೌಪ್ಯವಾಗಿಡದೆ ಮಾತನಾಡುವುದರ" ಅರ್ಥ ಆತನು ತನ್ನ ಶಿಷ್ಯರಿಗೆ ಪ್ರತ್ಯೇಕವಾಗಿ ಬೋಧಿಸಿರಲಿಲ್ಲ ಎಂದೇ ಆಗಿದೆ. ಆತನು ಪ್ರತ್ಯೇಕವಾಗಿ ಅವರಿಗೆ ಬೋಧಿಸಿದನು (ಮಾರ್ಕ 4:34; ಲೂಕ 10:23). ಆದರೆ ಆತನ ಪ್ರತ್ಯೇಕವಾದ ಬೋಧನೆಯು ಆತನ ಸಾರ್ವಜನಿಕ ಬೋಧನೆಯೊಂದಿಗೆ ಯಾವುದೇ ಸಂಘರ್ಷವನ್ನು ಹೊಂದಿರಲಿಲ್ಲ. ಮುಂದೆ, ಪ್ರತ್ಯೇಕವಾಗಿ ಬೋಧಿಸುವ ಆತನ ಒಂದೇ ಉದ್ದೇಶವು ಅಡಗಿಸುವದು ಆಗಿರಲಿಲ್ಲ (ನೋಡಿ ಮತ್ತಾಯ 10:27). [46]McGarvey and Pendleton, 695. ಮತ್ತೊಂದು ಕೆನ್ನೆಯನ್ನು ತೋರಿಸು ಎಂಬ ಯೇಸುವಿನ ಬೋಧನೆಯು (ಮತ್ತಾಯ 5:39) ಲೂದರಿನ ಮನಸ್ಸಿನಲ್ಲಿತ್ತು. [47]ಪೇತ್ರ ನಿರಾಕರಿಸುವಿಕೆಯ ಕಥೆಯು ಕಾಯಫ ಮುಂದೆ ಯೇಸುವಿನ ನಿಲ್ಲಿಸುವಿಕೆಯ ಕಥೆಯ ಜೊತೆ ಸಮ್ಮಿಶ್ರಗೊಂಡಿದೆ; ಆದರೆ ನಮ್ಮ ಉದ್ದೇಶಕ್ಕೋಸ್ಕರ, ಮೊದಲು ಕಾಯಫನ ಮುಂದೆ ಯೇಸುವನ್ನು ಅಭ್ಯಾಸಿಸುವಾ ಮತ್ತು ನಂತರ (ಮುಂದಿನ ಪಾಠದ ಆರಂಭದಲ್ಲಿ) ಪೇತ್ರ ನಿರಾ ಕರಣೆಯನ್ನು ಅಭ್ಯಾಸಿಸುವಾ. [48]ಅಣ್ಣನ ಮನೆ ಮತ್ತು ಕಾಯಫನ ಮನೆ ಎರಡೂ ಒಂದೇ ಬೀದಿಯಲ್ಲಿದ್ದವು ಎಂದು ಕೆಲವರು ಯೋಚಿಸುವವರಾಗಿದ್ದಾರೆ. ಹೇಗೂ, ಇತ್ತೀಚಿನ ಶೋಧನೆಯ ಪ್ರಕಾರ ಎರಡೂ ಮನೆಗಳು ಒಂದಕ್ಕೊಂದು ಕೆಲವರು ಅಂತರದಲ್ಲಿರುವದು ಕಂಡುಬಂದಿದೆ. [49]Robert L. Thomas, ed., and Stanley N. Gundry, assoc. ed., *A Harmony of the Gospels* (Chicago: Moody Press, 1978), 329. ಇದು ಕಾನೂನು ಬಾಹಿರವಾದ ಸಭೆಯಾಗಿರಬಹುದು (ಈ ಇಂಥ ವಿಶೇಷ ಅವಧಿಗೆ ಆಮಂತ್ರಿತವಾಗಿದ್ದರು. [50]Richard Rogers, *The Life of Christ and His Teaching* (Lubbock, Tex.: Sunset International Bible Institute External Studies Department, 1995), 95.

[51]ಯೇಸು ತನ್ನ ದೇಹದ ಬಗ್ಗೆ ಮಾತನಾಡುತ್ತಿದ್ದನು ಹೊರತಾಗಿ ದೇವಾಲಯದ ಬಗೆಗೆ ಅಲ್ಲ ಎಂದು ಕೊನೇಪಕ್ಷ ಕೆಲವಾದರೂ ಮಹಾಸಭೆಯ ಸದಸ್ಯರು ಅರಿತುಕೊಳ್ಳಬಹುದಿತ್ತು (ನೋಡಿರಿ ಮತ್ತಾಯ 27:63). ಯಾವುದೇ ಕಾರಣಕ್ಕಾಗಿ, ಯೇಸುವಿನ ಪರೀಕ್ಷೆಗಾಗಿ ಈ ದೋಷಾರೋಪಣೆ ಯನ್ನು ಮುಂದುವರೆಸಲಿಲ್ಲ. ಹೇಗೂ, ನಂತರದಲ್ಲಿ ಸ್ತೆಫನನ್ನು ಸಭೆಯ ಮುಂದೆ ಎಳೆದು ತರುವಾಗ ಇದೇ ತರದ ಚರ್ಚೆಯು ಎದ್ದಿತು (ನೋಡಿ ಅಪೊಸ್ತಲರ ಕೃತ್ಯಗಳು 6:13, 14). [52]ಕಾಯಫನು ಆಣೆಯಿಟ್ಟದ್ದಕ್ಕಾಗಿ ಯೇಸು ಉತ್ತರಿಸಿದನು. ಯೇಸುವಿನ ಬೋಧನೆಯು ಆಣೆಗೆ ವಿರುದ್ಧವಾಗಿದ್ದು (ಮತ್ತಾಯ 5:34) ಇದು ಸಾರ್ವಜನಿಕವಾದ ಆಣೆಗಳನ್ನು ಒಳಗೊಂಡಿಲ್ಲ ಎಂದು ಈ ಉದಾಹರಣೆಯಿಂದ ನಾವು ತಿಳಿಯಬಹುದು. [53]"ಇದನ್ನು ನೀನೇ ಹೇಳಿದ್ದಿ" ಎಂದು ಮತ್ತಾಯನು ದಾಖಲಿಸಿದ ಯೇಸುವಿನ ಉತ್ತರದಂತೆ (ಮತ್ತಾಯ 26:64), "ಹೌದು" ಎಂದು ಹೇಳುವುದರ ಪಡೆನುಡಿಯ ರೀತಿಯು ಆಗಿದೆ. ಈ ಹಿಂದೆಯೇ ಯೇಸು ತಾನು ಕ್ರೈಸ್ತನೆಂದು (ಎದುರು ನೋಡುತ್ತಿರುವ ಯೆಹೂದಿ ಮೆಸ್ಸೀಯನು) ಸಾರ್ವಜನಿಕವಾಗಿ ಒಪ್ಪಿಸ್ಕೊಂಡಿದ್ದನು (ಯೋಹಾನ 5:17, 18; 10:30-39; ನೋಡಿರಿ ಮತ್ತಾಯ 22:41-46), ಆದರೆ ಈ ಕಂಟೋಕ್ತಿಯ ಬಗೆಗೆ ಮಹಾಯಾಜಕನು ಪ್ರತ್ಯಕ್ಷವಾಗಿ ಯಾವುದೇ ಸಾಕ್ಷಿಯನ್ನು ಹುಡುಕಲು ಅಥವಾ ಕೊನೇಪಕ್ಷ ಒಪ್ಪುವಂಥ ಪುರಾವೆಯ ಸಾಕ್ಷಿಗಾಗಿ ಅಸಮರ್ಥನಾಗಿದ್ದನು. [54]"ನಿನ್ನ ತೀರ್ಪು ಏನು?" ಎಂಬ ಪಾಠದಲ್ಲಿನ ಚರ್ಚೆಯನ್ನು ನೋಡಿರಿ. [55]ಇದೊಂದು ಒಬ್ಬನು ಕಣ್ಣುಮುಚ್ಚಿಕೊಂಡಿದ್ದು ತನ್ನನ್ನು ಮುಟ್ಟಿದವನನ್ನು ಅಥವಾ ತನ್ನೊಡನೆ ಮಾತನಾಡಿದವನನ್ನು ಊಹಿಸುವಂಥ ಹಳೆಯ ಮಕ್ಕಳ ಆಟವಾಗಿದೆ. (ನಾನು ಮಗುವಾಗಿದ್ದಾಗ ಇದನ್ನು "ಕುರುಡನ ಬುಡುಡಿಕೆ" ಎಂದು ನಾವು ಕರೆಯುತ್ತಿದ್ದೆವು.) ಇದೇ ತರದ ಕೀಳು ಮನಸ್ಸಿನ ವೈಪರಿತ್ಯದೊಡನೆ ಯೇಸುವಿನ ವೈರಿಗಳು ಕಂಡುಬಂದರು. [56]ಲೂಕನ ಅಧಿಕಾರಿಗಳ ಮೇಲೆ ದೋ ಷವನ್ನು ಹೊರಿಸುವುದನ್ನು ಸೂಚಿಸಿದರೆ ಮಹಾಸಭೆಯ ಯೇಸುವನ್ನು ನಿಂದಿಸಿತು ಎಂಬ ಭಾವನೆಯನ್ನು ಇಡುವುದಾಗಿದೆ. ಮಾರ್ಕನ ವಿವರಣೆಯು ಎರಡೂ ಕೂಡಾ ಕರ್ತನನ್ನು ತಪ್ಪಾಗಿ ನಡೆಸಿಕೊಂಡವು ಎಂಬುದನ್ನು ಸೂಚಿಸುವುದಾಗಿದೆ. ಅಧಿಕಾರಿಗಳು ಯೇಸುವನ್ನು ತಪ್ಪಾಗಿ ನಡೆಸಿಕೊಳ್ಳುವಾಗ, ನಿಶ್ಚಿತವಾಗಿ ಅವರು ಆತನ ಬಗೆಗಿನ ಭಯವನ್ನು ಕಳೆದು ಕೊಂಡಿದ್ದರು (ನೋಡಿ ಯೋಹಾನ 18:6). ಸನ್ಹೆದ್ರೀನಿನ ಕೃತ್ಯವನ್ನು ನಂತರ ಸ್ತೆಫನನೊಡನೆ ಮಹಾಸಭೆಯ ನಡೆದುಕೊಂಡ ರೀತಿಯೊಡನೆ ಹೋಲಿಸಿರಿ (ಅಪೊಸ್ತಲರ ಕೃತ್ಯಗಳು 7:54, 57, 58).